
ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 24 ಸಂಪುಟ : 2 ಸಂಚಿಕೆ : 3 ಫೆಬ್ರವರಿ 1 ರಿಂದ 15–1998 ಪುಟಗಳು : 24 ರೂ. 5.

ಕಲ್ಯಾಣಾದ್ಭುತ ಗಾತ್ರಾಯಾ । ಕಾಮಿತಾರ್ಥ ಪ್ರದಾಯಿನೇ ॥
ಶ್ರೀಮದ್ವೆಂಕಟನಾಥಾಯಾ । ಶ್ರೀನಿವಾಸಾಯಾ ಮಂಗಳಂ ॥



ದೇವರು ಶಕ್ತಿಯ ಒಂದು ರೂಪ !
ದೇವನೊಬ್ಬ, ನಾಮ ಹಲವು !!

ಕೊಡಗು ⊛ ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾವಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು|| ಗೀತಾ ಮೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು|| ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮಣ್ಣಾಪುರ ಧರಣಿ ಗಣಪತಿ

ಮುದ್ರಕರು :
ಮಣ್ಣಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು-12.
ಫೋನ್ : 516771

ಒಳನೋಟ

	ಪುಟಗಳು
● ಸಂಪಾದಕೀಯ	2
● ನಿಷ್ಠಾವಂತ ಪೊಲೀಸ್ ಅಧಿಕಾರಿ ಪಟ್ಟಡ ಅಣ್ಣಯ್ಯ ಬೆಳ್ಯಪ್ಪ	3
● ಗೌಡಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ [ಮುಂದುವರಿದ ಭಾಗ]	5
● ನನ್ನ ಕೊಡಗು, ಐಕ್ಯತೆಯ ಹಾಡು (ಕವನ)	6
● ಗೌಡರ ವಿವಾಹ ಪದ್ಧತಿ [ಮುಂದುವರಿದ ಭಾಗ]	7
● ದೇವರು–ಒಂದು ಚಿಂತನೆ	8
● ಕೊಡಗು ಪ್ರತ್ಯೇಕತೆ ಬಗ್ಗೆ ಸಮಾಜಗಳ ನಿಲುವು	9
● ಪನ್ನಂಗಾಲತಮ್ಮೆ [ಕೊಡಗಿನ ಜನಪದ ಕಥೆ]	10
● ಕರಿಯ ಕಾಸಿಂಗ್–ಬಿಳಿಯ ದೇಸಿಂಗ	12
● ವಿಜೃಂಭಿಸಿದ ಗೌಡ ಜನಾಂಗದ ಸಂತೋಷ ಕೂಟ 1998	13
● ಟೀಕೆ–ಟಿಪ್ಪಣಿ	15
● ನಿಮ್ಮ ಪತ್ರಗಳು	16

ಅರೆ ಭಾಷೆರಾ ವಿಭಾಗ

● "ಕತ್ತಲೆ ಕಳ್ದ್‌ದ್..." [ಮುಂದುವರಿದ ಭಾಗ]	17
● ಶೂ ಹಾಕುದೇ ಬ್ಯಾಡ, ಚಪ್ಪಲಿ ಹಾಕಂಡ್ರೆ ಸಾಕ್	18
● ಮನೆ ಬುಟ್ಟ್ ಹೋದ ವೇಣು	20

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ :

ಇದಕ್ಕೆ ಕಾರಣವೇನು ?

ಕೊಡಗಿನಲ್ಲಿ ಸ್ವಾತಂತ್ರ್ಯ ಬರುವವರೆಗೆ ಕೆಲವು ಜನ ಪದವೀಧರರು, ಡಾಕ್ಟರ್, ಒಬ್ಬ ಡಿಸ್ಟ್ರಿಕ್ಟ್ ಜಡ್ಜ್, ಒಬ್ಬ ಪಶುವೈದ್ಯಾಧಿಕಾರಿ, ಇಬ್ಬರು ವಕೀಲರು ಹೊರತು ಬೇರ ಯಾವುದೇ ಗೆಜೆಟೆಡ್ ಉದ್ಯೋಗಸ್ಥರಿರಲಿಲ್ಲ. ಸ್ವಾತಂತ್ರ್ಯ ಬಂದನೇಲೆ ಹಲವಾರು ಜನ ಡಾಕ್ಟರುಗಳು, ವಕೀಲರು, ಉಪಾಧ್ಯಾಯರು, ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರು, ಇಂಜಿನಿಯರುಗಳು, ಪಶುವೈದ್ಯಾಧಿಕಾರಿಗಳು ಆಗಿದ್ದಾರೆ. ಹಲವಾರು ಕೆ. ಎ. ಎಸ್. ಅಧಿಕಾರಿಗಳಾಗಿದ್ದಾರೆ.

ಆದರೆ ಕೊಡಗಿನ ಗೌಡ ಯುವಕ ಯುವತಿಯರಲ್ಲಿ ದಿ॥ ನಿಡ್ಯಮಲೆ ಮುದ್ದಪ್ಪನವರ ನಂತರ ಯಾರೊಬ್ಬರೂ ನ್ಯಾಯಾಧೀಶರಾಗಲಿಲ್ಲಿ. ದಿ॥ ಪ್ರೊ॥ ಮಾವೋಜಿ ಜನಾರ್ಧನರವರು ಕರ್ನಾಟಕ ಸರ್ಕಾರದ ಅಡ್ವಕೇಟ್ ಜನರಲ್ ಆಗಿದ್ದರು.

ಶ್ರೀ ಕೋಳಿಬೈಲು ಬೆಳ್ಯಪ್ಪನವರು ಐ.ಎ.ಎಸ್. ಪದವಿಯನ್ನು ಗಳಿಸಿದರು. ಆದರೆ ಅವರು ನೇರವಾಗಿ ಐ.ಎ.ಎಸ್. ಪರೀಕ್ಷೆಗೆ ಕುಳಿತು ಪಾಸಾಗಿ ಐ.ಎ.ಎಸ್. ಸಿಕ್ಕಿದವರಲ್ಲ. ಹಾಗಾಗಿ ನಮ್ಮ ಯುವಕ ಯುವತಿಯರು ಯಾರೂ ಐ.ಎ.ಎಸ್. ಪರೀಕ್ಷೆಗೆ ಸ್ಪರ್ಧಿಸುವುದಕ್ಕೆ ಪ್ರಯತ್ನ ಪಡುತ್ತಿಲ್ಲವೇ ? ಅದೂ ಬಹಳ ಕಷ್ಟದ ಪರೀಕ್ಷೆಯೇ. ಕೆ.ಎ.ಎಸ್. ಪರೀಕ್ಷೆಗೆ ಕೂತು ಪಾಸ್ ಮಾಡುವವರು ಸಹ ಬಹಳ ಕಡಿಮೆ ಸಂಖ್ಯೆ. ಕೆ.ಎ.ಎಸ್.ನಲ್ಲಿ ಪಾಸಾಗುವವರು ವರ್ಷಕ್ಕೆ ಒಬ್ಬರೋ ಇಬ್ಬರೋ ಇರಬಹುದು. ಇಂಜನಿಯರ್, ಡಾಕ್ಟರ್ ಮುಂತಾದ ಯಾಂತ್ರಿಕ ಪದವಿಗಳಿಗಾಗಿ ಬೇಕಾದಷ್ಟು ಹಣ ಖರ್ಚು ಮಾಡುತ್ತಿರುವಾಗ ಮೇಲೆ ಹೇಳಿದ ಪರೀಕ್ಷೆಗಳಿಗೆ ನಮ್ಮ ಯುವಕ ಯುವತಿಯರು ಏಕೆ ಪ್ರಯತ್ನಿಸುತ್ತಿಲ್ಲ ? ನಮ್ಮ ಯುವ ವಕೀಲರೇಕೆ ನ್ಯಾಯಾಧೀಶರಾಗಲು ಪ್ರಯತ್ನಿಸುತ್ತಿಲ್ಲ ? ಇದಕ್ಕೆ ರಾಜಕೀಯ ಹಿನ್ನೆಲೆ ಇಲ್ಲದಿರುವ ದೋಷವೇ ? ಅಥವಾ ಯುವಕ ಯುವತಿಯರ ಅಸಡ್ಡೆಯೇ ? ಬೆಂಗಳೂರಿನಲ್ಲಿ ಒಕ್ಕಲಿಗ ಬಂಧುಗಳು ಐ.ಎ.ಎಸ್., ಕೆ.ಎ.ಎಸ್. ಅಭ್ಯರ್ಥಿಗಳಿಗೆ ಪರೀಕ್ಷೆಗೆ ಕೂರಲು ತಕ್ಕ ಮಾಹಿತಿ ಮತ್ತು ಬೋಧನಾ ತರಗತಿಗಳು, ಕೃಷಿಕ ಫೌಂಡೇಶನ್ ಸಂಸ್ಥೆಯ ಮುಖಾಂತರ ಸಹಾಯ ಮಾಡುತ್ತಿದ್ದಾರೆ. ಈ ವಿಷಯವನ್ನು ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು ತಮ್ಮ ಕೈಪಿಡಿಯಲ್ಲಿ ಪ್ರಕಟಿಸಿದ್ದಾರೆ.

ನಮ್ಮ ಸಮಾಜಗಳು ವಿದ್ಯಾ ಸಂಘದವರು ಈ ರೀತಿಯ ಪರೀಕ್ಷೆಗಳಿಗೆ ಬೇಕಾದ ಪುಸ್ತಕಗಳನ್ನು ಕೊಂಡು ಜಿಲ್ಲೆಯ ಕೇಂದ್ರಗಳಲ್ಲಿ ಒಂದೊಂದು ಗ್ರಂಥಾಲಯಗಳನ್ನು ಸ್ಥಾಪಿಸಿ, ಯುವಜನಾಂಗವನ್ನು ಪ್ರೋತ್ಸಾಹಿಸಬೇಕು. ಈ ವಿಷಯದಲ್ಲಿ ಸಮಾಜದ ಬುದ್ಧಿ ಜೀವಿಗಳು ಜೊತೆ ಸೇರಿ ಚರ್ಚಿಸಿ, ಕಾರ್ಯರೂಪಕ್ಕೆ ತರಬೇಕು. ಈ ರೀತಿ ಮಾಡಿದರೆ ಮೇಲೆ ಹೇಳಿದ ಕೊರತೆಯನ್ನು ನೀಗಬಹುದೆಂಬ ಅಭಿಪ್ರಾಯವನ್ನು ಸಂಗಾತಿ ಈ ಮೂಲಕ ವ್ಯಕ್ತಪಡಿಸುತ್ತದೆ.

ಬಡತನವನ್ನು ಮೆಟ್ಟಿ ನಿಂತು ನಿಷ್ಠಾವಂತ ಪೊಲೀಸ್ ಅಧಿಕಾರಿಯಾದ

ಪಟ್ಟಡ ಅಣ್ಣಯ್ಯ ಬೆಳ್ಯಪ್ಪ

ಹುಲಿಯ ಹಾಲಿನ ಮೇವುಂಡು ಬೆಳೆದವರೆಂಬ ಪ್ರತೀತಿಗೆ ತಕ್ಕವರಾದ ಕೊಡಗಿನ ಜನ ತಮ್ಮ ಶೂರತನ, ಸಾಹಸಮಯ ಜೀವನಗಳ ಮೂಲಕ ವೀರ ಪರಂಪರೆಯನ್ನೇ ಹುಟ್ಟು ಹಾಕಿದವರು. ಪ್ರಾಚೀನ ಕಾಲದಿಂದಲೂ ಖಡ್ಗ ಹಿಡಿದು ಆಳರಸರ ಬೆಂಗಾವಲು ಭಂಟರಾಗಿ, ಸೈನಿಕರಾಗಿ ತಮ್ಮ ಪ್ರಾಣಾಪಾಯವನ್ನು ಲೆಕ್ಕಿಸದೆ ಹೋರಾಡುವ ಮನೋಭಾವನೆಯನ್ನು ಹೊಂದಿರುವ ನಮ್ಮ ಜನರು ಕ್ಷತ್ರಿಯ ಜನಾಂಗಕ್ಕೆ ಸೇರಿದವರೆಂದು ಇತಿಹಾಸ ಹೇಳುತ್ತದೆ. ಇಂದಿಗೂ ಸಮವಸ್ತ್ರ ಧರಿಸಿ ಕೋವಿ ಹಿಡಿದು ದೇಶ ರಕ್ಷಣೆ ಮಾಡುವುದೆಂದರೆ ಕೊಡಗಿನವರಿಗೆ ಹೆಮ್ಮೆಯ ವಿಷಯ. ಪೊಲೀಸ್ ಇಲಾಖೆಯಾಗಲಿ ಅಥವಾ ಸೈನಿಕ, ಅರೆಸೈನಿಕ ಪಡೆಗಳೇ ಆಗಿರಲಿ, ಅನೇಕರು ನಿರ್ಲಕ್ಷಿಸುವ ಕೆಳಹಂತದ ಹುದ್ದೆಗೆ ಸೇರ್ಪಡೆಗೊಂಡು ತಮ್ಮ ಸೇವಾಮನೋಭಾವ, ನಿಷ್ಠಾವಂತಿಕೆಗಳಿಂದ ಮೇಲೇರಿ ಬಂದವರು ಹಲವರು. ಹೀಗೆ ಕೆಳಹಂತದಿಂದ ಬಡ್ತಿ ಪಡೆದು ಇಂದು ಕೆ.ಎಸ್.ಆರ್.ಪಿ.ಯ ಸಹಾಯಕ ಕಮಾಂಡೆಂಟ್ ಅಂದರೆ ಡಿ.ವೈ.ಎಸ್ಪಿ. ಆಗಿ ಸೇವೆ ಸಲ್ಲಿಸುತ್ತಿರುವ ಪೊಲೀಸ್ ಅಧಿಕಾರಿಯೇ ಪಟ್ಟಡ ಅಣ್ಣಯ್ಯ ಬೆಳ್ಯಪ್ಪ.

ಭಾಗಮಂಡಲದಿಂದ ಹಿಡಿದು ಸೂರ್ಲಬ್ಬಿಯ ತನಕ ಹಬ್ಬಿರುವ ಪಶ್ಚಿಮ ಘಟ್ಟಗಳ ಸರಹದ್ದಿನಲ್ಲಿ ಬರುವ ಊರುಗಳು ಇಂದಿಗೂ ಆಧುನಿಕ ಸೌಲಭ್ಯದಿಂದ ವಂಚಿತಗೊಂಡಿವೆ. ಈ ರೇಖೆಯ ಮೇಲೆಯೆ ಬರುವ ಒಂದು ಗ್ರಾಮ ಮದೆನಾಡಿನಲ್ಲಿ ಈಗಲೂ ಹಲವು ಮನೆಗಳು ವಿದ್ಯುತ್ ವಂಚಿತವಾಗಿವೆ, ರಸ್ತೆಸಂಪರ್ಕದಿಂದ ದೂರ ಉಳಿದಿವೆ. ಹಳ್ಳಬಿದ್ದ ರಸ್ತೆಗಳಿದ್ದೂ ವಾಹನ ವಂಚಿತವಾಗಿವೆ. ಇಂತಹ ಬಡತನದ ಊರಿನಲ್ಲಿ 1949ರಲ್ಲಿ ಪಟ್ಟಡ ಅಣ್ಣಯ್ಯ, ಕಮಲಮ್ಮ ದಂಪತಿಗಳ ಒಂಭತ್ತು ಮಂದಿ ಮಕ್ಕಳಲ್ಲಿ ಮೂರನೆ ಮಗನಾಗಿ ಜನಿಸಿದವರೇ ಶ್ರೀ ಬೆಳ್ಯಪ್ಪ



ಪಟ್ಟಡ ಅಣ್ಣಯ್ಯ ಬೆಳ್ಯಪ್ಪ

ನವರು. ಊರೇ ಬಡತನದಿಂದ ಕೂಡಿದ ಮೇಲೆ ಇವರ ಕುಟುಂಬವೂ ಸಹಜವಾಗಿಯೇ ಶ್ರಮಜೀವಿಗಳ ಅತ್ಯಂತ ಬಡ ಕುಟುಂಬವಾಗಿತ್ತು. ಮದೆನಾಡಿನಲ್ಲಿ ಆಗ ವಿದ್ಯಾಭ್ಯಾಸ ಪಡೆಯುವುದು ದುಸ್ತರವಾಗಿದ್ದರಿಂದ ಇವರು ತಮ್ಮ ಹಿರಿಯ ಸಹೋದರಿಯ ಸಹಾಯದಿಂದ ಕಾರುಗುಂದದಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಚೆಟ್ಟಗೇರಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು, ನಾಪೋಕ್ಲುವಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮತ್ತು ಅಲ್ಲಿನ ಪದವಿಪೂರ್ವ ಕಾಲೇಜ್‌ನಲ್ಲಿ ಪಿ.ಯು.ಸಿ.ವರೆಗಿನ ವಿದ್ಯಾಭ್ಯಾಸ ಪಡೆಯುವ ಹೊತ್ತಿಗೆ, ಮನೆಯ ಆರ್ಥಿಕ ಪರಿಸ್ಥಿತಿ ತೀವ್ರ ಹದಗೆಟ್ಟಿತು, ಆದರೆ ಅವರ ತಂದೆಯವರು ಎದೆಗುಂದದೆ ಮಗನನ್ನು ಪದವೀಧರಗೊಳಿಸಬೇಕೆಂಬ ಏಕೈಕ ಉದ್ದೇಶದಿಂದ ತಮಗೊದಗಿದ ಯಾವುದೇ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ ಮಗನಿಗೆ ಶಿಕ್ಷಣದ ರಥ ನಿರ್ಮಿಸಿದರು. ಬೆಳ್ಯಪ್ಪನವರು ದ್ವಿತೀಯ ವರ್ಷದ ಪದವಿ ಪಡೆಯುತ್ತಿರುವಾಗಲೇ 1969 ರಲ್ಲಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯಲ್ಲಿ ನೇರವಾಗಿ ಹವಾಲ್ದಾರ್ ಆಗಿ ನೇಮಕಗೊಂಡರು.

ತಮ್ಮ ಸೇವಾವಧಿಯಲ್ಲಿ ಬೆಂಗಳೂರು, ಗುಲ್ಬರ್ಗಾ, ಮೈಸೂರುಗಳಲ್ಲಿ ಸೇವೆ ಸಲ್ಲಿಸಿ ಕ್ರಮವಾಗಿ ಮುಂಬಡ್ತಿ ಪಡೆಯುತ್ತಾ 1993ರಲ್ಲಿ ಅಸಿಸ್ಟೆಂಡ್ ಕಮಾಂಡೆಂಟ್ [ಡಿವೈಎಸ್ಪಿ] ಆಗಿ ಮುಂಬಡ್ತಿ ಪಡೆದು ಪ್ರಸ್ತುತ ಶಿವಮೊಗ್ಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವೃತ್ತಿ ಜೀವನದಲ್ಲಿ ಇವರು ಕೇವಲ ವೃತಿಯನ್ನಲ್ಲದೆ, ವೃತ್ತಿಗೆ ಅಗತ್ಯವಾದ ಹೆಚ್ಚಿನ ತರಭೇತಿಗಳನ್ನು ಹೊರ ರಾಜ್ಯಗಳಲ್ಲಿ ಪಡೆದು ಬಂದಿರುತ್ತಾರೆ. ಮಧ್ಯಪ್ರದೇಶದ ನೀಮುಚಿನನಲ್ಲಿ ಶಸ್ತ್ರ ರಹಿತ ಹೋರಾಟದಂತಹ ದೈಹಿಕ ಶ್ರಮದ ತರಭೇತಿಯನ್ನು, ಇಂದೋರ್‌ನಲ್ಲಿ ಹೆಚ್ಚಿನ ಶಸ್ತ್ರ ತರಭೇತಿಯನ್ನು ಅಲ್ಲದೆ ಬೆಂಗಳೂರಿನಲ್ಲಿ ಬಾಂಬ್ ಡಿಸ್ಪೋಸಲ್ ತರಭೇತಿಯನ್ನು ಪಡೆಯುವುದರೊಡನೆ, ಅಪೂರ್ಣಗೊಂಡ ಪದವಿಯನ್ನು ಪೂರ್ಣಗೊಳಿಸಿ, ಮುಂಬಡ್ತಿಗೆ ಅಗತ್ಯವಾದ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡಿರುತ್ತಾರೆ. ಇವರ ಉತ್ತಮ ಸೇವೆಯನ್ನು ಪರಿಗಣಿಸಿ ಸರ್ಕಾರ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದೆ.

ಹೀಗೆ ಬೆಳ್ಯಪ್ಪನವರು ಹವಾಲ್ದಾರ್ ಹುದ್ದೆಯ ಮೂಲಕ ಪೊಲೀಸ್ ಇಲಾಖೆ ಸೇರಿ ಡಿ.ವೈ.ಎಸ್.ಪಿ. ಯಂತಹ ಮೇಲಿನ ಸ್ಥಾನವನ್ನು ಹೊಂದುವ ಮೂಲಕ

ತಮ್ಮ ವೃತ್ತಿ ಜೀವನದ ಯಶಸ್ಸನ್ನು ಕಂಡವರು. ಇದಕ್ಕೆ ಬೆಳ್ಳಿಯಪ್ಪನವರ ಸೇವಾ ಮನೋಭಾವ, ಶಿಸ್ತು, ದಕ್ಷತೆ ಮತ್ತು ಕಾರ್ಯತತ್ಪರತೆಯೇ ಕಾರಣವಾಗಿದ್ದು, ತಮ್ಮ ಸಹೋದ್ಯೋಗಿಗಳಿಗೆ ಹಾಗೂ ನಮ್ಮ ಜನಾಂಗಕ್ಕೆ ಮಾದರಿಯಾಗಿದ್ದಾರೆ. ಇಂಗ್ಲೀಷ್ ಭಾಷೆಯಲ್ಲಿ ನಿರರ್ಗಳವಾಗಿ ಮಾತಾನಾಡುವ ಇವರು ನಮ್ಮ ಜನಾಂಗದ ದುಃಸ್ಥಿತಿಗೆ ಮಮ್ಮಲಮರುಗುತ್ತಾರೆ. "ನಮ್ಮಲ್ಲಿ ಒಬ್ಬ ಮುಂದುವರೆಯುವುದನ್ನು ಕಂಡರೆ ಹೊಟ್ಟೆಕಿಚ್ಚಿನಿಂದ ಕಾಲೆಳೆಯುವುದೇ ಜಾಸ್ತಿ, ಮೊದಲು ಇದು ತಪ್ಪಬೇಕು, ಯುವಕರು ವಿದ್ಯಾವಂತರಾಗಿ ಎಲ್ಲಾಕ್ಷೇತ್ರಗಳಲ್ಲಿ ಮುಂದುವರೆಯಬೇಕು. ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಅವರಿಗೆ ಮಾರ್ಗದರ್ಶನ ಮಾಡಿ ಪ್ರೋತ್ಸಾಹ ನೀಡಬೇಕು. ನಿಧಾನವಾಗಿಯಾದರು ಈಗೀಗ ನಮ್ಮ ಜನ ಮುಂದುವರೆಯುತ್ತಿರುವುದು ಸಂತಸದ ಬೆಳವಣಿಗೆ" ಎಂದು ಇವರು ಮನಬಿಚ್ಚಿ ಮಾತನಾಡುತ್ತಾರೆ.

ಎಲ್ಲಾ ಯಶಸ್ವೀ ಮನುಷ್ಯರ ಹಿಂದೆ ಕಾಣದ ಕೈಯೊಂದಿರುತ್ತದೆ ಎಂಬುದು ಪ್ರತೀತಿಯ ಮಾತಾಗಿದೆ. ಈ ಮಾತಿಗೆ ಅನುರೂಪವಾಗಿದ್ದಾರೆ ಇವರ ಧರ್ಮಪತ್ನಿ ಪಾಕ ಗ್ರಾಮದ ಮುಕ್ಕಾಟಿರ ತಮ್ಮಯ್ಯನವರ ಪ್ರಥಮ ಪುತ್ರಿ ಸುಶೀಲಮ್ಮನವರು. ಸರಳ ಸೌಜನ್ಯತೆಯ ಸಾಕಾರಮೂರ್ತಿಯಾಗಿರುವ ಸುಶೀಲಮ್ಮನವರನ್ನು 1974ರಲ್ಲಿ ವಿವಾಹವಾದ ಬೆಳ್ಯಪ್ಪನವರಿಗೆ ಇಬ್ಬರು ಮಕ್ಕಳು. ಹಿರಿಯ ಮಗಳು ವನಿತಾ ಬಿ.ಎ. ಪದವಿ ಪೂರೈಸಿ, ಅದರೊಡನೆ ಲ್ಯಾಬರೇಟರಿ ಟೆಕ್ನಿಕಲ್ ಕೋರ್ಸ್ ಅಭ್ಯಾಸಿಸಿ ಈಗ ಶಿವಮೊಗ್ಗದ ಹೆಸರಾಂತ ಆರೋಗ್ಯ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದರೆ, ಮಗ ವಿನೋದ್‌ಕುಮಾರ್ ಬಿ. ಕಾಂ. ವ್ಯಾಸಂಗ ಮಾಡುತ್ತಿದ್ದಾನೆ.

ಕಷ್ಟಪಟ್ಟರೆ ಫಲವುಂಟು ಎನ್ನುವ ಮಾತಿನಂತೆ, ಬಡತನದಲ್ಲಿ ಹುಟ್ಟಿದರೂ ಅದನ್ನು ಮೆಟ್ಟಿನಿಂತು, ಸ್ವಪ್ರಯತ್ನದಿಂದ ಯಶಸ್ಸಿನ ಬೆನ್ನೇರಿ ಬಂದ ಇವರನ್ನು ಅಧಿಕಾರದ ಅಹಂ ಎಂದೂ ತಟ್ಟಲಿಲ್ಲ. ಆದುದರಿಂದ ಇಲಾಖೆಯಲ್ಲಿ ಸಹೋದ್ಯೋಗಿಗಳಿಂದ ಅಪಾರವಾಗಿ ಗೌರವಿಸಲ್ಪಡುತ್ತಿದ್ದಾರೆ. ಬೆಳ್ಯಪ್ಪನವರು ಪತ್ನಿ ಹಾಗೂ ಮಕ್ಕಳೊಂದಿಗೆ ಖಾಸಾಗಿ ಜೀವನದಲ್ಲಿ ಯಶಸ್ವಿ ಬಾಳುವೆ ನಡೆಸಿದ್ದಾರೆ. ವೃತ್ತಿ ಜೀವನದಲ್ಲೂ ಯಶಸ್ಸು ಸಾಧಿಸಿದ ಅಂದಿನ ಹವಾಲ್ದಾರ್ ಬೆಳ್ಯಪ್ಪ ಇಂದು ಡಿವೈಎಸ್ಪಿ ಬೆಳ್ಯಪ್ಪ ಆಗಿದ್ದಾರೆ. ಇನ್ನೂ ಪೊಲೀಸ್ ಇಲಾಖೆಯ ಸೇವೆಯಲ್ಲಿರುವ ಬೆಳ್ಯಪ್ಪನವರು ಆದಷ್ಟು ಬೇಗನೇ ಇನ್ನೂ ಉನ್ನತ ಪದವಿಗೇರಲೆಂಬುದು "ಸಂಗಾತಿ"ಯ ಹಾರೈಕೆಯಾಗಿದೆ.

ಸಂದರ್ಶನ : ಪಿ.ಎಲ್.ಎಸ್.

ರಾಜ್ಯಮಟ್ಟದ ಶ್ರೀ ಆರ್. ಎಂ. ಪಾಟೀಲ್ ಪರ್ಯಾಯ ಪಾರಿತೋಷಕ ವಿಜೇತ ಶ್ರೀ ಕುಂಭಗೌಡನ ಉತ್ತಯ್ಯ ರಂಜಿತ್

ಶ್ರೀ ಕುಂಭಗೌಡನ ಉತ್ತಯ್ಯ ರಂಜಿತ್‌ರವರು ದಿನಾಂಕ 20-11-1997ರಲ್ಲಿ ಗುಲ್ಬರ್ಗಾದಲ್ಲಿ ನಡೆದ ಅಂತರ ಸಹಕಾರ ತರಬೇತಿ ಕೇಂದ್ರಗಳ ಸಹಕಾರ ಕುರಿತ ರಾಜ್ಯ ಮಟ್ಟದ ಚರ್ಚಾಕೂಟದಲ್ಲಿ, ಕೊಡಗು ಜಿಲ್ಲಾ ಮಡಿಕೇರಿ ಕೇಂದ್ರದ ಪ್ರತಿನಿಧಿಯಾಗಿ ಭಾಗವಹಿಸಿ ಶ್ರೀ ಆರ್. ಎಂ. ಪಾಟೀಲ್‌ರ ಪರ್ಯಾಯ ಪಾರಿತೋಷಕವನ್ನು ಪಡೆದಿದ್ದು ಅಲ್ಲದೆ, ವೈಯಕ್ತಿಕವಾಗಿಯೂ ಸಹ ದ್ವಿತಿಯ ಬಹುಮಾನವನ್ನು ಪಡೆದಿರುತ್ತಾರೆ. ಈ ಮೇಲಿನ ಪಾರಿತೋಷಕವು 1988ರಲ್ಲಿ ಸಹ ಈ ಕೇಂದ್ರದ ಪಾಲಾಗಿತ್ತು.

ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ ವರ್ಷದಲ್ಲಿ ಎರಡು ಬಾರಿ ನಡೆದ ಸಹಕಾರ ಕುರಿತ ಭಾಷಣಕ್ಕಾಗಿ ಪ್ರಥಮ ಬಹುಮಾನವನ್ನು ಗಿಟ್ಟಿಸಿದ ಇವರು ಗೌಡ ಜನಾಂಗದ ಹೆಮ್ಮೆಯ ಪುತ್ರರಲ್ಲದೆ "ಸಂಗಾತಿ"ಯ ಯುವ ಬರಹಗಾರರು ಹೌದು. ಶ್ರೀಯುತರು ಇನ್ನು ಹೆಚ್ಚಿನ ಸಾಹಸವನ್ನು ಸಾಧಿಸಲೆಂಬುದೇ "ಕೊಡಗು ಸಂಗಾತಿ"ಯ ಶುಭ ಹಾರೈಕೆಯಾಗಿದೆ.

● ವರದಿ : ಪ ಮು.ಪ್ರ.

ಚುಟುಕ

ಒಬ್ಬ ಶ್ರೀಮಂತನ ಮನೆಯಲ್ಲಿ ಒಬ್ಬ ನೌಕರನು ಕಳವು ಮಾಡಿ ಸಿಕ್ಕಿ ಬಿದ್ದನು. ಅವನನ್ನು ಪೋಲಿಸರ ವಶಕ್ಕೆ ಒಪ್ಪಿಸಿದನು. ಪೋಲಿಸರು ಆ ನೌಕರನನ್ನು ಹಿಡಿದುಕೊಂಡು ಶ್ರೀಮಂತನ ಎದುರು ನಿಲ್ಲಿಸಿ ತಪ್ಪನ್ನು ಒಪ್ಪಿಕೊಳ್ಳಲು ಹೇಳಿದರು. ಆಗ ಶ್ರೀಮಂತನು ಬಹಳ ಕೋಪದಿಂದ, "ಲೋ ಮೂರ್ಖ ನಾನು ನಿನ್ನನ್ನು ನನ್ನ ಮಗನ ಹಾಗೆ ಸಾಕಿಕೊಂಡಿದ್ದೆ, ಆದರೂ ನೀನು ನನ್ನ ಮನೆಯಲ್ಲಿ ಕಳವು ಮಾಡಿದ್ದು ಸರಿಯೇ ? ಎಂದು ಕೇಳಿದಾಗ ನೌಕರನು ಹೇಳಿದನು "ನಾನು ನೀವು ನನ್ನ ಅಪ್ಪನ ಹಾಗೆ ಎಂದು ತಿಳಿದುಕೊಂಡು ಕಳವು ಮಾಡಿದೆ. ನೀವು ನನ್ನನ್ನು ಪೋಲಿಸರ ವಶಕ್ಕೆ ಒಪ್ಪಿಸಿದ್ದು ಸರಿಯೆ "? ಎಂದ. ಆಗ ಶ್ರೀಮಂತನ ಮುಖವು ಪೆಚ್ಚಾಯಿತು.

–ಚಂಡೀರ ಸುಮಿತ್ರ ಅಪ್ಪಾಜಿ, ಚೆಯ್ಯಂಡಾಣೆ.

ಗೌಡಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ

ಹಿಂದಿನ ಸಂಚಿಕೆಯಿಂದ

ಹಾಗಾಗಿ ಕೆಲವು ಸಲ ಕೊಂಬು ವಾಲಗದೊಂದಿಗೆ ಇವರನ್ನು ಮೇನೆಯಲ್ಲಿ ಕೂರಿಸಿ ಜನ ಕರೆದೊಯ್ಯುತ್ತಿದ್ದರಂತೆ. ಗಾಂಭೀರ್ಯದಿಂದ ಕೂಡಿದ ಇವರಲ್ಲಿ ಜನತೆಗೆ ಪ್ರೇಮ, ಗೌರವವಿತ್ತು. ಆ ಕಾಲದಲ್ಲಿ ಕೊಡಗಿನಲ್ಲಿ ಕೊಡಗರು ಬಹಳಷ್ಟು ಸಮರ್ಥರಾಗಿದ್ದು ಅನುಕೂಲಸ್ಥರಾಗಿದ್ದರು. ಹಾಗಾಗಿ ಆಂಗ್ಲರ ಭಾಷೆಯಾದ ಇಂಗ್ಲೀಷ್ ಭಾಷೆಯಲ್ಲೂ ಪ್ರಾವೀಣ್ಯತೆ ಸಾಧಿಸಿದರು. ಇದರಿಂದ ಇಂಗ್ಲೀಷರೊಂದಿಗೆ ಸಂಭಾಷಿಸಲು ಅವರ ಮೆಚ್ಚುಗೆ ಗಳಿಸಿಕೊಳ್ಳಲು ಇವರಿಗೆ ಸಾಧ್ಯವಾಗಿತ್ತು. ಆದ್ದರಿಂದ ನಮ್ಮನ್ನು ಆಳುತ್ತಿದ್ದ ಚೀಫ್ ಕಮೀಷನರಿಗೆ ಮತ್ತು ಅವರ ಆಂಗ್ಲ ಸಿಬ್ಬಂದಿ ವರ್ಗದವರಿಗೆ ಕೊಡಗರೊಂದಿಗೆ ಬೆರೆತು ಬಾಳಲು ಅನುಕೂಲವಾಗಿತ್ತು. ಅವರಿಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಗಳಿಸಿಕೊಳ್ಳಲು ಸಾಧ್ಯವಾಯಿತು. ಕೊಡಗಿನಲ್ಲಿ ಕೊಡಗೇತರರು ಯಾವುದರಲ್ಲೂ ಮುಂದೆ ಬರಲು ಸಾಧ್ಯವಾಗದ ವಾತಾವರಣವಿತ್ತು. ಆ ಕಾಲದಲ್ಲಿ ಗೌಡರನ್ನು ಕೊಟ್ಟಪಾಳೆ ಅಥವಾ ತುಳುವ ಎಂದು ಸಂಭೋಧಿಸುತ್ತ ತುಚ್ಛವಾಗಿ ಕಾಣುತ್ತಿದ್ದರಂತೆ.

ಆ ಕಾಲದಲ್ಲಿ ಪಾರುಪತ್ತೆಗಾರರ ಮೇಲಾಧಿಕಾರಿಗಳನ್ನು ಸುಭೇದಾರರೆಂದು ಸಂಭೋಧಿಸುತ್ತಿದ್ದರು. ರಾಮಪ್ಪನವರು ಮೇಲಾಧಿಕಾರಿ ಪಾಲೆಕಂಡ ಮನೆತನಕ್ಕೆ ಸೇರಿದವರಾಗಿದ್ದರು. ಈ ಸುಭೇದಾರರು ನನ್ನಜ್ಜನಿಗೆ ಆಗಾಗ ಕಿರುಕುಳ ಕೊಡುತ್ತಿದ್ದರಂತೆ. ಅಲ್ಲದೆ ಈತನನ್ನು ಯಾವಾಗ ಕೆಳಗಿಳಿಸುವುದು ಎಂದು ಸಮಯ ಕಾಯುತ್ತಿದ್ದರಂತೆ. ಈ ರೀತಿಯ ಸಂಚಿಗೆ ನನ್ನಜ್ಜ ಸಿಕ್ಕಿದ ಘಟನೆ ಈ ರೀತಿ ಇದೆ. ಕಂದಾಯ ಇಲಾಖೆಯ ಲೆಕ್ಕ ಪತ್ರಗಳು ಹಾಗೂ ಸಿಬ್ಬಂದಿ ವರ್ಗದವರ ಮುಖ್ಯಾಧಿಕಾರಿಯಾದ ದೊರೆ ಭೇಟಿಕೊಡುತ್ತಿದ್ದರಂತೆ. ಈ ರೀತಿ ಭಾಗಮಂಡಲ ನಾಡು ಕಛೇರಿಗೆ ಹೋಗಿದ್ದರು. ಸಿಬ್ಬಂದಿ ವರ್ಗ ಮತ್ತು ಪಾರುಪತ್ತೆಗಾರರ ಕಾರ್ಯದಕ್ಷತೆಯನ್ನು ಪರಿಶೀಲಿಸಿ ವಿಶ್ರಾಂತಿಗೆ ಮುನ್ನ ಸುಭೆದಾರರೊಂದಿಗೆ ಇಂಗ್ಲೀಷ್‌ನಲ್ಲಿ ತಮ್ಮ ಕುದುರೆಗೆ ತಕ್ಕ ಆಹಾರದ ಏರ್ಪಾಡು ಮಾಡಿಸು ಎಂದರಂತೆ. ಆದರೆ ಬೆಳಿಗ್ಗೆ ದೊರೆ ಕುದುರೆ ಸಮೀಪಕ್ಕೆ ಬಂದಾಗ

ಲೇಖಕ : ದಿ|| ಶ್ರೀ ನಿಡ್ಯಮಲೆ ಆನಂತ್

ಆಹಾರವಿಲ್ಲದೆ ಅದು ಸೊರಗಿತ್ತು. ದೊರೆಗೆ ಸಿಟ್ಟು ಬಂದು ಈ ಬಗ್ಗೆ ವಿಚಾರಿಸಿದಾಗ ತಾನು ಈ ಬಗ್ಗೆ ಪಾರುಪತ್ತೇಗಾರ ರಾಮಪ್ಪನಿಗೆ ಕುದುರೆಗೆ ಮೇವಿನ ಏರ್ಪಾಡು ಮಾಡಲು ತಿಳಿಸಿದ್ದೆ ಎಂದರಂತೆ. ಹಾಗಾದರೆ ಆತನನ್ನು ವಿಚಾರಿಸು ಎಂದಾಗ, ದೊರೆ ಕೇಳುತ್ತಿದ್ದಾರೆ, "ನೀನು ಯಾತಕ್ಕಾಗಿ ಕುದುರೆಗೆ ಹುಲ್ಲು ನೀರಿನ ವ್ಯವಸ್ಥೆ ಮಾಡಿಸಿಲ್ಲ" ಎಂದು ಸುಭೆದಾರ ನನ್ನಜ್ಜನನ್ನು ಕನ್ನಡದಲ್ಲಿ ಪ್ರಶ್ನಿಸಿದಾಗ ನನಗೆ ಈ ಬಗ್ಗೆ ಯಾರು ಹೇಳಿರಲಿಲ್ಲ, ಹೇಳಿದ್ದರೆ ಮಾಡಿಸುತ್ತಿದ್ದೆ ಎಂದರಂತೆ. ಕನ್ನಡ ಗೊತ್ತಿಲ್ಲದ ದೊರೆ ರಾಮಪ್ಪ ಏನು ಹೇಳಿದರು ಎಂದು ಸುಭೇದಾರರಲ್ಲಿ ಕೇಳಿದಾಗ ಅದು ನನ್ನ ಕರ್ತವ್ಯ ಅಲ್ಲ ಹಾಗಾಗಿ ನಾನು ಮಾಡಲಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಇಂಗ್ಲೀಷಿನಲ್ಲಿ ದೊರೆಗೆ ಹೇಳಿದರು. ದೊರೆಗೆ ಪಾರುಪತ್ತೆದಾರ ಈ ರೀತಿ ಹೇಳಿದನಲ್ಲ ಎಂದು ಸಿಟ್ಟು ಬಂದು ಈತನನ್ನು ವಿರಾಜಪೇಟೆ ನಾಡಿಗೆ ವರ್ಗ ಮಾಡಲು ಕ್ರಮ ತೆಗೆದುಕೊ ಎಂದು ತೆರಳಿದರು. ಆ ಪ್ರಕಾರ ಕೊಡವರೇ ಹೆಚ್ಚಾಗಿರುವ ವಿರಾಜಪೇಟೆಗೆ ವರ್ಗವಾದ ಹುಕ್ಕುಂ ಬಂತು. ಸುಭೆದಾರನು ತನ್ನ ಮೇಲೆ ಹೀಗೆ ಸುಳ್ಳು ಆಪಾದನೆ ಮಾಡಿದ ಬಗ್ಗೆ ನನ್ನಜ್ಜನಿಗೆ ಅರಿವಾಯಿತು. ಈ ಬಗ್ಗೆ ದೊರೆಯಲ್ಲಿ ಹೇಳಿ ಕರುಣೆ ಅನುಕಂಪ ಪಡೆಯಲು ಯಾರೂ ಸಹಕರಿಸಲಿಲ್ಲ. ಕೊಡಗೇತರರಲ್ಲಿ ಇಂಗ್ಲೀಷ್ ಬಲ್ಲವರು ಯಾರು ಇಲ್ಲದ್ದರಿಂದಲೇ ಅಥವಾ ಕೊಡಗರಿಗೆ ಹೆದರಿಯೇ ನನ್ನಜ್ಜನ ಸಹಾಯಕ್ಕೆ ಯಾರೂ ಮುಂದೆ ಬಂದಿಲ್ಲ. ಈ ವಿಷಯದಲ್ಲಿ ನನ್ನಜ್ಜ ತುಂಬಾ ನೊಂದರು. ಗೌಡಜನಾಂಗ ಹೆಚ್ಚಾಗಿ ವಾಸವಿದ್ದ ಭಾಗಮಂಡಲ ನಾಡಿನಲ್ಲಿ ಇಂಥ ಸಂದರ್ಭ ಬಂದ ಮೇಲೆ ಇಂಗ್ಲೀಷ್ ಭಾಷೆ ಗೊತ್ತಿಲ್ಲದೆ ಕೊಡವ ಜನಾಂಗದವರೇ ಹೆಚ್ಚಾಗಿ ವಾಸಿಸುತ್ತಿದ್ದ ವಿರಾಜಪೇಟೆಯಲ್ಲಿ ಕೆಲಸ ಮಾಡಲು ಕಷ್ಟ. ಅವರ ಸಹಕಾರ ತನಗೆ ಖಂಡಿತ ಸಿಗಲಾರದು ಎಂದು ಭಾವಿಸಿದರು. ಈ ಕೆಲಸದಿಂದ ನಿವೃತ್ತನಾಗುವುದೇ ತನಗೆ ಹಿತವೆಂದುಕೊಂಡು ಕಾರಣವಿಲ್ಲದೆ ರಾಜಿನಾಮೆ ಕೊಟ್ಟರೆ ದೊರೆಗೆ ಸಿಟ್ಟುಬಂದು ಅಂಗೀಕಾರ ಮಾಡದೆ ಇರಬಹುದೆಂದು ಅದಕ್ಕೊಂದು ಉಪಾಯ ಹುಡುಕಿದರು. ತನ್ನ ದೃಷ್ಟಿ ಮಂದವಾಗಿದೆ. ಸರಿಯಾಗಿ ಓದಲು ಮತ್ತು ಬರೆಯಲು ತನಗೆ ಸಾಧ್ಯವಾಗುತ್ತಿಲ್ಲ ಎಂದು ಸಿವಿಲ್ ಸರ್ಜನರಿಂದ ಸರ್ಟಿಫಿಕೇಟನ್ನು ಪಡೆಯಲು ನಿರ್ಣಯಿಸಿದರು. ಆಗಿನ ಸಿವಿಲ್ ಸರ್ಜನ್ ಕೂಡ ಆಂಗ್ಲದವರಾಗಿದ್ದರಂತೆ. ಅಲ್ಲದೆ ಒಳ್ಳೆ ಗುಣವಂತರಾಗಿದ್ದರಂತೆ. ಸರಿಯಾಗಿ ಕಣ್ಣು ಕಾಣುತ್ತಿಲ್ಲ ಎಂದು ಮಾಡಿದ ನಾಟಕವೋ, ಸರ್ಜನರ ಕೃಪಾಕಟಾಕ್ಷವೋ ಅಂತೂ ಈ ಬಗ್ಗೆ ಸರ್ಟಿಫಿಕೇಟ್ ದೊರೆಯಿತು. ಹೀಗೆ ಅಜ್ಜ ಕೆಲಸದಿಂದ ನಿವೃತ್ತಿ ಹೊಂದಿ ಜೀವನದ ಮತ್ತೊಂದು ಘಟ್ಟಕ್ಕೆ ಬಂದರು.

ತಮ್ಮ ತಂದೆಯ ಸೋಲಿನಿಂದ ಪಡೆದ ಅನುಭವದಿಂದಾಗಿಯೋ ಏನೋ ಎಂಬಂತೆ ಮುಂದೆ ಇವರ ಮಕ್ಕಳಾದ ಬೆಳ್ಯಪ್ಪ, ಮುದ್ದಪ್ಪ ಮತ್ತು ಸೋಮಣ್ಣನವರು ಕೊಡಗಿನಲ್ಲಿ ಗೌಡ ಜನಾಂಗದ ಹಿರಿಮೆಯನ್ನು ಎತ್ತಿ ಹಿಡಿದು ಜಯಭೇರಿ ಬಾರಿಸಿದರು. [ಮುಂದುವರಿಯುವುದು]

ನನ್ನ ಕೊಡಗು

ಕೊಡಗು ಏಕೀಕರಣದ ಕೂಗು ಎಲ್ಲೆಡೆಯೂ ಮೊಳಗುತಿರುವುದನ್ನು ನೋಡಿ ಸಂತೋಷವಾಗಿತ್ತು. ಕೊಡಗಿನ ಜನತೆ ಈಗಾದರೂ ಎಚ್ಚೆತ್ತುಕೊಂಡರಲ್ಲಾ ಎಂಬ ಹೆಮ್ಮೆಯೂ ಆಯಿತು. ಆದರೆ ಇತ್ತೀಚೆಗೆ ಕೊಡಗಿನಲ್ಲಿ ನಡೆದ ಹಿಂಸಾಕೃತ್ಯಗಳನ್ನು ಕೇಳಿ ಮನಸ್ಸಿಗೆ ಬಹಳ ಖೇದವಾಯಿತು.

ಒಂದು ಒಳ್ಳೆಯ ಕಾರ್ಯಕ್ಕೆ ವಿಘ್ನ ನೂರೆಂಟು ಬರುವುದು ಸಹಜ. ಆದರೆ ಅದನ್ನೆಲ್ಲಾ ಬದಿಗೊತ್ತಿ ಧೈರ್ಯದಿಂದ ಗುರಿ ಸಾಧಿಸುವತ್ತ ಕೊಡಗಿನ ಯುವ ಜನತೆ ಕಾರ್ಯೋನ್ಮುಖರಾಗುವುದು ಉಚಿತ.

ಕೊಡಗಿನ ಮೂಲ ನಿವಾಸಿಗಳು ಕೊಡವರು ಮಾತ್ರ ಅಲ್ಲ. ಈಗಿನ ಅಂಕಿ ಅಂಶಗಳಂತೆ ಗೌಡರು ಇಲ್ಲಿಯೆ ಇದ್ದವರೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ತಗ್ಗು ಇರುವ ಕಡೆ ನೀರು ಹರಿದು ಬರುವಂತೆ, ಫಲವತ್ತಾದ ನಿರ್ಜನ ಪ್ರದೇಶ, ಒಳ್ಳೆಯ ನೀರಾವರಿ ಇರುವ ಭೂಪ್ರದೇಶವನ್ನು ಹುಡುಕಿಕೊಂಡು ಬಂದು ನೆಲೆಸುವುದು ಪುರಾತನ ಕಾಲದಿಂದಲೂ ನಡೆದು ಬಂದಿದೆ. ಹಾಗೆಯೇ ದಕ್ಷಿಣದಿಂದ ಕಾವೇರಿಯನ್ನು ಆಶ್ರಯಿಸಿ ಬಂದವರು ಕೊಡವರಾದರೆ, ಉತ್ತರದಿಂದ ಕಾವೇರಿಯ ಮೂಲವನ್ನು ಹಿಡಿದು ಬಂದವರು ಗೌಡರು. ಹಾಗಾದರೆ ಕೊಡವ ಹಾಗೂ ಕೊಡಗು ಗೌಡರು ಇಬ್ಬರೂ ಒಂದೇ ತಾಯಿಯ ಎರಡು ಮಕ್ಕಳಿದಂತೆ. ಆದ್ದರಿಂದ ಇವರೀರ್ವರಲ್ಲಿ ಭಿನ್ನಾಭಿಪ್ರಾಯ ಅಷ್ಟು ಸಮಂಜಸ ಅಲ್ಲ. ಕಾವೇರಿಮಾತೆ ನಮ್ಮೆಲ್ಲರ ಸಾಕುತಾಯಿ.

ನಮ್ಮ ಸನಾತನ ಧರ್ಮದಲ್ಲಿ ಉಕ್ತವಾಗಿರುವಂತೆ ವರ್ಣಭೇದಗಳು ಪುರಾಣಗಳ ಕಾಲದಿಂದಲೂ ಇದೆ. ಆದರೆ ಅವರೆಲ್ಲರೂ ಯಾವ ಯಾವ ರೀತಿಯ ಜಾತಿ ಭೇದವಿಲ್ಲದೆ, ಪರಸ್ಪರ ಸಹಕಾರ ಸೌಹಾರ್ದತೆಗಳಿಂದಲೆ ನಡೆದು ಬಂದಿದ್ದಾರೆ. ಇಂದು ಮುಸ್ಲಿಮರ ಮತ್ತು ಅನೇಕ ಪಾಶ್ಚಿಮಾತ್ಯರ ದಾಳಿ ಮತ್ತು ವಲಸೆಗಳಿಂದಾಗಿ ಭಾರತದಲ್ಲಿ ಅನೇಕ ಧರ್ಮದ ಜನರು ನೆಲೆಸಿದ್ದಾರೆ. ನಮ್ಮ ದೇಶ ಅನೇಕತೆಯಲ್ಲಿ ಏಕತೆಯನ್ನು ತೋರಿಸಿ ಮೆರೆದ ದೇಶ. ಇದು ವಿಶ್ವಾದ್ಯಂತ ವಿಸ್ಮಯ ಪಡುತ್ತಿರುವ ಸಂಗತಿಯಾಗಿದೆ. ಹೀಗಿದ್ದಾಗ ನಮ್ಮ ಪುಟ್ಟ ಕೊಡಗಿನಲ್ಲಿ ಈ ರೀತಿಯ ಕಿಡಿ ಹಚ್ಚಿದವರ್ಯಾರೇ ಇರಲಿ, ಇದಕ್ಕೆ ಕೊಡಗಿನ ಜನತೆ ಮಾನ್ಯತೆ ನೀಡದೆ ಮಾನವರು ನಾವೆಲ್ಲಾ ಒಂದೇ ಎಂಬ ಮಾನವೀಯ ದೃಷ್ಟಿಯನ್ನಿಟ್ಟು, ಕೊಡಗಿನ ತನ್ನದೇ ಆದ ವಿಶಿಷ್ಟ ಶಾಂತಿ ಮತ್ತು ಗೌರವವನ್ನು ಕಾಪಾಡಿಕೊಂಡು ಬರಬೇಕೆಂದು ಮತ್ತೊಮ್ಮೆ ಕೈ ಮುಗಿದು ಬೇಡಿಕೊಳ್ಳುವೆನು.

○ **ಬಿಟ್ಟೀರ ಚೋಂದಮ್ಮ ಶಂಭು**
ಬೆಂಗಳೂರು

ಐಕ್ಯತೆಯ ಹಾಡು

ಗೌಡರ ಮಕ್ಕಳೆಲ್ಲಾ ಒಂದಾಗಿ ಬನ್ನಿ ।
ಅಮರ ಸುಳ್ಯ ಮಕ್ಕಳೆಲ್ಲಾ ಒಂದಾದೋ ಎನ್ನಿ ॥
ಗೆಳೆತನವ ವರದ ಹಸ್ತ ನೀಡಿ ಬನ್ನಿ ।
ಮೊಳೆತಿರುವ ಭೇದಗಳ ಬಿಟ್ಟು ಬನ್ನಿ ॥

ಒಂದು ತಾಯಿಯ ಮಕ್ಕಳು ನಾವಾದೋ ಎನ್ನಿ ।
ಅರೆಭಾಷೆಯ ಮಕ್ಕಳೆಲ್ಲಾ ಒಂದಾಗಿ ಬನ್ನಿ ॥
ಮೇಲು ಕೀಳೆಂಬ ಭೇದಗಳ ಬಿಟ್ಟು ಬನ್ನಿ ।
ಮೇಲೆರುವ ಮಕ್ಕಳನ್ನು ಮುಂದೆ ತನ್ನಿ ॥

ಶಿಕ್ಷಣದ ದಿಸೆಯಲ್ಲಿ ನೆನೆಯೋಣ ಅನುದಿನವು ।
ಉಳಿದಿರಲಿ ಕುರುಂಜಿಯವರ ಅಭಯ ಹಸ್ತವು ॥
ಗಂಗಾ ಗಂಗಳರು, ಕದಂಬಾಡಿಗಳು ಆಳಿದರು ಅಂದು ।
ಘಟ್ಟ ಬಯಲು ಒಂದಾಗಿ ಹೋರಾಡಿತಂದು ॥

ಕೆದಂಬಾಡಿ ರಾಮನು, ಗುಡ್ಡೇರ ಅಪ್ಪಯ್ಯನು
ತ್ತೆತ್ತರಂದು ಪ್ರಾಣಾ ।
ಈ ಘಟ್ಟ ವೀರರನ್ನು ನೆನೆಯೋಣಾ ಕಾರೋಣರಾಗಿ ॥
ಅನುದಿನವು ನೆನೆಯೋಣ ವೆಂಕಟೇಶನನ್ನು ।
ಮರೆಯದಿರು ಕಾವೇರಮ್ಮ, ಇಗ್ಗುತಪ್ಪನನ್ನು ॥

ಹತ್ತು ಕುಟುಂಬ ಹದಿನೆಂಟು ಗೋತ್ರ ಒಂದಾಗಿ ಬನ್ನಿ ।
ದುಡಿಯೋಣ ಇಂದು ವಿಶ್ವ ಹಿಂದೂಗಾಗಿ ॥
ಗೌಡರ ಮಕ್ಕಳೆಲ್ಲಾ ಒಂದಾಗಿ ಬನ್ನಿ ।
ಅಮರ ಸುಳ್ಯ ಮಕ್ಕಳೆಲ್ಲಾ ಒಂದಾದೊ ಎನ್ನಿ ॥

ಪಟ್ಟಡ ಮುತ್ತಣ್ಣ ಪ್ರಭಾಕರ್

ನಿಮಗಿದು ತಿಳಿದಿರಲಿ

ಕನ್ನಡದ ಮೊದಲ ಶಾಸನ – ಹಲ್ಮಿಡಿ ಶಾಸನ
ಕನ್ನಡದ ಮೊದಲ ಗ್ರಂಥ – ಕವಿರಾಜಮಾರ್ಗ

ಚಿಲ್ಲನ ಮನು, ಕುಯ್ಯಂಗೇರಿ

ಗೌಡರ ವಿವಾಹ ಪದ್ಧತಿ

ಪಟ್ಟ ವೀಳ್ಯ ಕೊಡುವುದು :

ವರನ ಕಡೆಯ ದಿಬ್ಬಣದ ಮುಖ್ಯಸ್ಥರು ಹೆಣ್ಣು ಗಂಡು ವಹಿಸಿಕೊಂಡ ನಂತರ ವರನ ಮನೆಯಲ್ಲಿ ನಡೆಯತಕ್ಕ ನಾಗೋಳಿ ಶಾಸ್ತ್ರಕ್ಕೆ ಹೆಣ್ಣಿನ ಕಡೆಯವರನ್ನು ಆಹ್ವಾನಿಸುವುದು ಕ್ರಮ. ಇಲ್ಲಿ ದಿಬ್ಬಣದ ಮುಖ್ಯಸ್ಥರು ಮದುಮಕ್ಕಳ ಕೈಯಿಂದ ಎರಡು ಎಲೆಯ ಪಟ್ಟೆ ವೀಳ್ಯವನ್ನು ಹೆಣ್ಣಿನ ಕಡೆಯವರಿಗೆ ಕೊಡಿಸಿ ಪಾದ ನಮಸ್ಕಾರ ಮಾಡಿಸುವರು. ದಿಬ್ಬಣದ ಮುಖ್ಯಸ್ಥರು ಕೂಡಾ ವಧುವಿನ ಒಕ್ಕಲೆಜಮಾನರಿಗೆ, ಊರು ಗೌಡರಿಗೆ, ಮುಖ್ಯಸ್ಥರಿಗೆ, ಸೋದರಮಾವನಿಗೆ, ಅಂತೆಯೇ ಅಕ್ಕಂದಿರಿಗೆ ವೀಳ್ಯಕೊಟ್ಟು ನಾಗೋಳಿ ಶಾಸ್ತ್ರಕ್ಕೆ ಆಹ್ವಾನಿಸುತ್ತಾರೆ.

ಉಪಹಾರ ಕೊಡುವುದು :

ದಿಬ್ಬಣವು ಸ್ವಲ್ಪ ದೂರ ಹೋದ ಬಳಿಕ ದಿಬ್ಬಣವನ್ನು ಪುನಃ ಕುಳ್ಳಿರಿಸಿ, ಅವರಿಗೆ ಉಪಹಾರವನ್ನು ಕೊಡುವರು. ದಿಬ್ಬಣದ ಮುಖ್ಯಸ್ಥರು, ಇತರರು ಹೆಣ್ಣಿನ ಮನೆಯವರಿಗೆ ನಮಸ್ಕಾರ ಹೇಳಿ ಅವರು ಬಂದ ಕಾರ್ಯವನ್ನು ಸಾಂಗವಾಗಿ ನೆರವೇರಿಸಿ ಕೊಟ್ಟುದಕ್ಕೆ ಧನ್ಯವಾದ ಅರ್ಪಿಸಿ ಪ್ರೀತಿಯ ಮಾತುಗಳನ್ನಾಡಿ ಸಂತೋಷದಿಂದ ದಿಬ್ಬಣವು ವರನ ಮನೆಯ ಕಡೆಗೆ ತೆರಳುವುದು. [ಈ ಸಮಯದಲ್ಲಿ ಕೆಲವರು ತುಪ್ಪದ ಶಾಸ್ತ್ರವನ್ನು ಮುಗಿಸಿಬಿಡುವರು. ಬಂದು ಹೋಗಿ ಆಗುವ ಬಹಳಷ್ಟು ಖರ್ಚಿನ ಬಗ್ಗೆ, ಇಲ್ಲವೇ ಬಹುದೂರದ ನೆಂಟಸ್ತನವಾದರೆ ಅನುಕೂಲಕ್ಕೆ ತಕ್ಕಂತೆ ಮಾಡುವರು.) ದಿಬ್ಬಣವು **ಹೊರಟ** ಒಡನೆ ವಧುವರರು ತುಪ್ಪದ **ಚೆಂಬನ್ನು** ಜೋಡು ತೆಂಗಿನಕಾಯಿಯನ್ನು ಹಿಡಿದುಕೊಂಡು ಮನೆ ಹತ್ತುವುದು. ಆಗ ಚಪ್ಪರದ ಹೆಬ್ಬಾಗಿಲಿನಲ್ಲಿ ಆರತಿ ಬೆಳಗಿ ತಂದೆ–ತಾಯಿ ಮದುಮಕ್ಕಳನ್ನು ಬರಮಾಡಿಕೊಂಡು ತುಪ್ಪವನ್ನು ತೆಂಗಿನಕಾಯಿಯನ್ನು ನೆಲ್ಲಕ್ಕಿ ಅಡಿಯಲ್ಲಿ ಇಟ್ಟು ಅಲ್ಲಿರುವ ಮುಖ್ಯಸ್ಥರು ತುಪ್ಪವನ್ನು ನೋಡಿ, ದೇವರಿಗೆ ದೀಪ ಉರಿಸಿ, ತುಪ್ಪದ ಶಾಸ್ತ್ರವನ್ನು ಮುಗಿಸಿ ಬೀಳ್ಕೊಡುವರು. ಒಡನೆ ಹಿಂತಿರುಗುವುದು.

ವರನ ಮನೆಯಲ್ಲಿ :

ವಧುವಿನ ಮನೆಯಿಂದ ಹೊರಟ ದಿಬ್ಬಣವು ವರನ ಮನೆಯ ಚಪ್ಪರದ ಅಡಿಗೆ ಬಂದಾಗ ವರನ ಮನೆಯಲ್ಲಿನ ಮುತ್ತೈದೆಯರು, ಮದುಮಕ್ಕಳಿಗೆ ಆರತಿ ಮಾಡಿ ಮನೆ ಹತ್ತಿಸಿಕೊಳ್ಳುತ್ತಾರೆ. ಇಲ್ಲಿ ವರನು ವಧುವಿನ ಕೈ ಹಿಡಿದು ಮೊದಲು ಬಲಗಾಲನ್ನು ಇಟ್ಟು ಮನೆ ಹತ್ತಿ ನೇರ ನೆಲ್ಲಕ್ಕಿ ಅಡಿಗೆ ಕರೆತಂದು "ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಹೇಳಿ ಕುಂಚುಮಿಯನ್ನು ಇಟ್ಟು ಮದುಮಕ್ಕಳನ್ನು ಹಸೆಗೆ ಸರಿಯಾಗಿ ಕೂರಿಸುತ್ತಾರೆ. ನೆಲ್ಲಕ್ಕಿ ಅಡಿಯಲ್ಲಿ ಕುಳಿತ ಮದುಮಕ್ಕಳಿಗೆ ವರನ ತಾಯಿ ಹಾಲು ಕೊಡುವರು ಅಲ್ಲಿ ಅವರ ಮತ್ತು ಹಿರಿಯರ ಪಾದ ಮುಟ್ಟಿ ಆಶೀರ್ವಾದ ಪಡೆಯುವುದು. ಮಡಿಲಕ್ಕಿಯನ್ನು ಸಹ ಬಿಚ್ಚಿ ನೆಲ್ಲಕ್ಕಿ ಅಡಿಯಲ್ಲಿ ಇಡುವುದು.

ಸೋದರ ಮರ್ಯಾದೆ :

ಮುಹೂರ್ತದ ದಿನ ವಧುವಿನ/ವರನ ಮನೆಯಲ್ಲಿ ವರನ ಸೋದರದವರನ್ನು ವಾದ್ಯಗೋಷ್ಠಿಯಲ್ಲಿ ಬರಮಾಡಿಕೊಂಡು ಮನೆ ಹತ್ತುವುದಕ್ಕೆ ಮುಂಚಿತವಾಗಿ ನೀರು ತಾಂಬೂಲ ಫಲಹಾರಾಧಿಕೊಟ್ಟು ಸತ್ಕರಿಸಿ ವಿವಾಹದ ಮನೆಗೆ ಗೌರವದಿಂದ ಬರಮಾಡಿಕೊಳ್ಳುವುದು.

ದಂಪತಿ ಮುಹೂರ್ತ :

ವರನ ಮನೆಯಲ್ಲಿ ಹೆಚ್ಚಿನ ಭಾಗ ದಂಪತಿ ಮುಹೂರ್ತವಾಗಿರುತ್ತದೆ. ಇಬ್ಬರನ್ನು ಒಟ್ಟಿಗೆ ಮೇಲ್ಕಟ್ಟಿನಡಿಯಲ್ಲಿ "ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಹೇಳಿ ಊರುಗೌಡರು/ಮುಖ್ಯಸ್ಥರು ಮುಹೂರ್ತಕ್ಕೆ [ಶೇಶೋಪಚಾರ]

ಕೃಪೆ :

ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಕೂರಿಸುವರು. ಮೊದಲು ವರದ ತಂದೆ ತಾಯಿ ಮೇಲ್ಕಟ್ಟಿನಡಿಯಲ್ಲಿ ಇರುವ ತೂಗುದೀಪಕ್ಕೆ ಅಕ್ಕಿ ಹಾಕಿ ವಧುವರರಿಗೆ ಸೇಷ ಅಕ್ಕಿ ಹಾಕಿದ ನಂತರ ಎಲ್ಲಾ ನೆಂಟರಿಷ್ಟರು ಬಂಧುಬಾಂಧವರು, ಊರಿನವರು ಮದುಮಕ್ಕಳ ತಲೆಗೆ ಅಕ್ಕಿ ಹಾಕಿ "ಆಯುರಾರೋಗ್ಯ ಸುಖಸಂಪನ್ನರಾಗಿ ಪುತ್ರ ಕಳೇತ್ರ ವಂಶಾಭಿವೃದ್ಧಿಯಾಗಿ ದೀರ್ಘಾಯುಷ್ಯರಾಗಿ ಬಾಳಿರಿ" ಎಂದು ಮನಸಾರೆ ಹರಸಿ ಅಕ್ಕಿ ಹಾಕುವರು. ಮತ್ತು ತಮ್ಮ ಉಡುಗೊರೆಗಳನ್ನು ಕೊಡುವರು.

ನಂತರ ಒಕ್ಕಲೆಜಮಾನರು ಒಂದು ಚೆಂಬು ನೀರು ಹಿಡಿದು ಸಭೆಯ ಸರ್ವರನ್ನು ಊಟಕ್ಕೆ ಆಮಂತ್ರಿಸುವರು. ಊಟವಾದ ನಂತರ ನಾಗೋಳಿ ಶಾಸ್ತ್ರ.

ಮರು ದಿಬ್ಬಣ :

ವಧುವಿನ ಮನೆಯವರಿಗೆ ವರನ ಮನೆಯಲ್ಲಿ ನಡೆಯುವ ನಾಗೋಳಿ ಶಾಸ್ತ್ರಕ್ಕೆ ಪಟ್ಟೆ ವೀಳ್ಯ ಕೊಟ್ಟು ದಿಬ್ಬಣ ಹೊರಟ ಒಡನೆ ವಧುವಿನ ಕಡೆಯವರು ಕೂಡಾ ಸ್ವಲ್ಪ ಜನಗಳು ಸೇರಿ ವರನ ಮನೆಗೆ ಇವರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಬರುವರು. **ಇದಕ್ಕೆ** ಮರು ದಿಬ್ಬಣ ಬರುವುದು ಎಂದು ಹೇಳುವರು. ಮರು ದಿಬ್ಬಣದವರನ್ನು ವಾದ್ಯಗೋಷ್ಠಿಯಲ್ಲಿ ಬರಮಾಡಿಕೊಂಡು, ನೀರು ವೀಳ್ಯ ಕೊಟ್ಟು ಸತ್ಕರಿಸುವುದು.

[ಮುಂದುವರಿಯುವುದು]

ದೇವರು – ಒಂದು ಚಿಂತನೆ

'ದೇವರು' ಎಂಬ ಶಬ್ಧದ ಅರ್ಥ ವಿವರಣೆ ನೀಡುವ ಅವಶ್ಯಕತೆ ಬಹುಶಃ ಇಲ್ಲ. ಇದ್ದರೂ ಅದು ಸ್ವಲ್ಪ ಕಷ್ಟವೆಂದೇ ಹೇಳಬಹುದು. ಪ್ರತಿಯೊಬ್ಬರು ತಮ್ಮ ಯೋಚನಾ ಶಕ್ತಿಗೆ ನಿಲುಕದಂತೆ ಈ ಶಬ್ಧಕ್ಕೆ ಅರ್ಥವಿವರಣೆ ನೀಡಿಕೊಂಡಿದ್ದಾರೆ. ಆದರೆ ಒಂದು ಮಾತಂತೂ ಸತ್ಯ. ಈ ಜಗತ್ತಿನಲ್ಲಿರುವ ಲಕ್ಷಾಂತರ ಮಂದಿ 'ದೇವರು' ಎಂಬ ಶಕ್ತಿ ಅಥವಾ ಕಲ್ಪನೆಯ ಮೇಲೆ ನಂಬಿಕೆ ಇಟ್ಟಿದ್ದಾರೆ.

'ದೇವರು' ಎನ್ನುವುದು ಮನುಷ್ಯನ ಕಲ್ಪನೆ ಎನ್ನುವುದು ಹಲವರ ಅಭಿಪ್ರಾಯ. ಇನ್ನು ಕೆಲವರ ಪ್ರಕಾರ 'ದೇವರು' ಎನ್ನುವುದು ಹಿರಿಯರಿಂದ ಮುಂದಿನ ಪೀಳಿಗೆಗಳಿಗೆ ಹರಿದು ಬಂದಿರುವಂತಹ ಒಂದು ನಂಬಿಕೆ. ತನ್ನ ರಕ್ಷಣೆ ಮತ್ತು ಸಕಲ ಸೌಕರ್ಯಗಳ ಪ್ರಾಪ್ತಿಗಾಗಿ ಸರ್ವೋಚ್ಚ ಶಕ್ತಿಯ ಕಲ್ಪನೆ ಎಂದರೆ 'ದೇವರ' ಕಲ್ಪನೆ, ಮನುಷ್ಯನಲ್ಲಿ ಮೂಡಿತು ಎನ್ನುವುದು ಇನ್ನು ಕೆಲವರ ವಾದ. ಸರ್ವೋಚ್ಚ ಶಕ್ತಿಯೊಂದರ ಅನುಭವ 'ದೇವರ' ಅಸ್ತಿತ್ವದ ಮೇಲಿನ ನಂಬಿಕೆಗೆ ಕಾರಣವೆನ್ನುವುದು ಇನ್ನೂ ಕೆಲವರ ಅಭಿಪ್ರಾಯ. ನಿಸರ್ಗವನ್ನೇ ದೇವರೆಂದು ತಿಳಿಯುವವರು ಕೆಲವರಾದರೆ ಹಲವರು ನಿಸರ್ಗದಿಂದ ದೇವರನ್ನು ಪ್ರತ್ಯೇಕಿಸಿದರು.

ವಿಕಾಸವಾದ ಮತ್ತು ದೇವರು :

ಚಾರ್ಲ್ಸ್ ಡಾರ್ವಿನ್ ಪ್ರತಿಪಾದಿಸಿದ ವಿಕಾಸವಾದದ ಪ್ರಕಾರ ಜೀವಿಗಳು ಉಳಿವಿಗಾಗಿ ಹೋರಾಟ ನಡೆಸಿದವು ಮತ್ತು ಈ ಹೋರಾಟಕ್ಕೆ ತಕ್ಕಂತೆ ವಿಕಾಸವು ನಡೆಯಿತು. ವಿಕಾಸವಾದದಲ್ಲಿ ಸತ್ಯಾಂಶವಿದ್ದರೂ ಅದು ಸಂಪೂರ್ಣ ಸತ್ಯವೆನ್ನುವುದನ್ನು ಒಪ್ಪಿಕೊಳ್ಳುವುದು ಕಷ್ಟ. ಉದಾಹರಣೆಗೆ: ವಿಕಾಸವಾದದ ಪ್ರಕಾರ ಜಿರಾಫೆಯು ನೆಲದ ಮೇಲಿದ್ದ ಆಹಾರದ ಕೊರತೆಯುಂಟಾದಾಗ ಎತ್ತರದ ಗಿಡಮರಗಳ ಎಲೆ, ಚಿಗುರುಗಳನ್ನು ತಿನ್ನಲು ಪ್ರಯತ್ನಿಸಿತು. ಈ ಪ್ರಯತ್ನದಿಂದ ಕಾಲಕ್ರಮದಲ್ಲಿ ಅವರ ಕತ್ತು ವಿಕಾಸಗೊಂಡು ಬಹಳ ಎತ್ತರವಾಯಿತು, ಇಲ್ಲಿ ಒಂದು ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಅದೇನೆಂದರೆ ಜಿರಾಫೆಯ ವರ್ಗಕ್ಕೆ ಸೇರಿದ ಮತ್ತು ಅದೇ ಪರಿಸರದಲ್ಲಿ ವಾಸಿಸುತ್ತಿದ್ದ ಇತರ ಪ್ರಾಣಿಗಳು ಈ ಪ್ರಯತ್ನವನ್ನು ಮಾಡಿರಲಿಲ್ಲವೇ ? ಮಾಡಿದ್ದರೂ ಅವುಗಳ ಕತ್ತು ಜಿರಾಫೆಯಂತೆ ಏಕೆ ಉದ್ದವಾಗಲಿಲ್ಲ ? ಒಂದು ವೇಳೆ ಅವು ಜಿರಾಫೆಯಂತೆ ಪ್ರಯತ್ನವನ್ನೇ ಮಾಡಲಿಲ್ಲವೆಂದು ಇಟ್ಟುಕೊಳ್ಳೋಣ. ಹಾಗಿದ್ದ ಪಕ್ಷದಲ್ಲಿ ಅವುಗಳ ಆಹಾರದ ಕೊರತೆಯಿಂದ ನಾಶವಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಜಿರಾಫೆಯ ಕಾಲದಲ್ಲಿದ್ದ ಪ್ರಾಣಿಗಳು ಈಗಲೂ ಇವೆಯಲ್ಲ !

ಇನ್ನೊಂದು ಪ್ರಶ್ನೆ. ಜೀವಿಗಳು ತಮ್ಮ ಉಳಿವಿಗಾಗಿ ಹೋರಾಟ ನಡೆಸಿದವು ಎನ್ನುವುದನ್ನು ಒಪ್ಪಿಕೊಳ್ಳಬಹುದು. ಆದರೆ ತಮ್ಮ ಪೀಳಿಗೆಯನ್ನು ಮುಂದುವರೆಸಲು ಎಲ್ಲಾ ಜೀವಿಗಳು ಏಕೆ ಪ್ರಯತ್ನಿಸುತ್ತವೆ? ತಾವು ಬದುಕಿದರೆ ಸಾಕಲ್ಲವೇ ? ತಮ್ಮ ಮುಂದಿನ ಪೀಳಿಗೆಯ ಬಗ್ಗೆ ಪ್ರಾಣಿಗಳೇಕೆ ಚಿಂತೆ ಮಾಡಬೇಕು ? ಪ್ರಾಣಿಗಳು ಇದೇ ರೀತಿ ಜೀವಿಸಬೇಕು ಎಂದು ನಿಯಂತ್ರಿಸುವ ಒಂದು ಶಕ್ತಿ ಇದೆ ಎಂಬುದನ್ನು ನಾವೀಗ ಒಪ್ಪಿಕೊಳ್ಳಬೇಕಾಗುತ್ತದೆ. ಈ ಶಕ್ತಿಯೇ 'ದೇವರು' ಎಂದು ಕರೆಯಲ್ಪಟ್ಟಿದೆ.

ಈ ಭೂಮಿ, ವಾತಾವರಣ, ಜೀವಿಗಳು ಒಂದಕ್ಕೊಂದು ಕರಾರುವಕ್ಕಾಗಿ ಹೊಂದಿಕೊಂಡಿವೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಈ ಭೂಮಿಯೊಳಗೆ ಮತ್ತು ಹೊರಗೆ ಒಂದು ಸುವ್ಯವಸ್ಥಿತವಾದ ಜಾಲವಿದೆ. ಇಷ್ಟು ಸುವ್ಯವಸ್ಥಿತವಾದ ಜಾಲ ವಿಕಾಸದಿಂದಾಗಿ ಉಂಟಾಯಿತು ಎಂದು ಒಪ್ಪಿಕೊಳ್ಳುವುದು ತೀರಾ ಕಷ್ಟ. ಅಥವಾ ಸುವ್ಯವಸ್ಥಿತ ಜಾಲವೊಂದು ಇದ್ದುದರಿಂದ ಜೀವಿಗಳ ವಿಕಾಸವಾಯಿತು ಎನ್ನುವುದಾದರೆ, ಸುವ್ಯವಸ್ಥಿತ ಜಾಲ ಹೇಗೆ ಉಂಟಾಯಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಉದಾಹರಣೆಗೆ : ಹಗಲು, ರಾತ್ರಿಗಳು ತಪ್ಪದೇ ಉಂಟಾಗುತ್ತವೆ. ವಾತಾವರಣದಲ್ಲಿ ಜೀವಿಗಳು ಬದುಕಲು ಆಮ್ಲಜನಕವಿದೆ. ಮನುಷ್ಯನ ದೇಹದೊಳಗೆ ಪ್ರವೇಶಿಸುವ ಆಮ್ಲಜನಕ ಶ್ವಾಸಕೋಶಗಳನ್ನು ತಲುಪುತ್ತದೆ. ಅಲ್ಲಿಂದ ರಕ್ತದ ಮೂಲಕ ಆಮ್ಲಜನಕ ಎಲ್ಲಾ ಜೀವಕೋಶಗಳನ್ನು ತಲುಪುತ್ತದೆ. ಈ ರಕ್ತ ದೇಹದೊಳಗೆ ತಯಾರಾಗುತ್ತದೆ.ಈ ರಕ್ತವನ್ನು ಹೃದಯ ನಿಯಮಿತವಾಗಿ ಪಂಪ್ ಮಾಡುತ್ತದೆ. ರಕ್ತವು ಹರಿಯಲು ರಕ್ತನಾಳಗಳ ವ್ಯವಸ್ಥೆಯಿದೆ. ಮಿದುಳು ದೇಹದೊಳಗಿನ ಕ್ರಿಯೆಗಳನ್ನು ನಿಯಂತ್ರಿಸುತ್ತದೆ. ಇವುಗಳೆಲ್ಲಾ ನಿರ್ದಿಷ್ಟವಾದ ವ್ಯವಸ್ಥೆಗಳೆಂಬುದನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳುತ್ತಾರೆ. ವಿಕಾಸವಾದದ ಮೂಲಕ ಇಂತಹದೊಂದು ವ್ಯವಸ್ಥೆ ನಿರ್ಮಾಣವಾದರೂ ಅದು ಇಷ್ಟೊಂದು ನಿರ್ದಿಷ್ಟವಾಗಿ ಮತ್ತು ಕರಾರುವಕ್ಕಾಗಿ ಇರಲು ಸಾಧ್ಯವಿಲ್ಲ. ಯಾವುದೋ ಒಂದು ಸರ್ವೋಚ್ಚ ಶಕ್ತಿ ಇಂತಹದೊಂದು ನಿರ್ದಿಷ್ಟವಾದ ವ್ಯವಸ್ಥೆಯನ್ನು ನಿರ್ಮಿಸಿದೆ ಎನ್ನುವುದನ್ನು ನಾವೀಗ ಒಪ್ಪಿಕೊಳ್ಳಬೇಕಾಗುತ್ತದೆ. ಆ ಸರ್ವೋಚ್ಚ ಶಕ್ತಿಯೇ 'ದೇವರು'.

ದೇವರ ಮೇಲಿನ ನಂಬಿಕೆ ಪ್ರಪಂಚದ ಎಲ್ಲಾ ಕಡೆ ಇರುವುದು ವಿಶೇಷ. ಕೇವಲ ನಮ್ಮ ದೇಶದಲ್ಲಿ ಮಾತ್ರ ದೇವರ ಮೇಲಿನ ನಂಬಿಕೆ ಅಥವಾ ಕಲ್ಪನೆ ಇರುವುದಾದರೆ ನಾವು ಅಂತಹ ನಂಬಿಕೆ ಅಥವಾ ಕಲ್ಪನೆಯನ್ನು ಆಧಾರರಹಿತವೆಂದು ಬದಿಗಿರಿಸಬಹುದು. ಆದರೆ ಪ್ರಪಂಚದೆಲ್ಲೆಡೆ ಇರುವ

ದೇವರ ಮೇಲಿನ ನಂಬಿಕೆಯನ್ನು ಹೇಗೆ ಬದಿಗಿರಿಸಲು ಸಾಧ್ಯ ?

ತಮ್ಮ ಕಷ್ಟ, ಕಾರ್ಪಣ್ಯಗಳು ದೂರವಾದಾಗ ಭಕ್ತರು ಅದನ್ನು ದೇವರ ಕೃಪೆಯೆಂದು ತಿಳಿಯುತ್ತಾರೆ. ಇದೊಂದು ಕೇವಲ ಮೂಢನಂಬಿಕೆಯೆಂದು ನಾವು ಭಾವಿಸುವುದಾದರೆ ಈ ಮುಂದಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ. ಹತ್ತು ಮಹಡಿಗಳ ಕಟ್ಟಡವೊಂದರಿಂದ ಕೆಳಗಿನ ಗಟ್ಟಿ ನೆಲಕ್ಕೆ ಬಿದ್ದ ವ್ಯಕ್ತಿ ಖಂಡಿತವಾಗಿ ಸಾಯುತ್ತಾನೆ. ಇಲ್ಲವೇ ತೀವ್ರವಾಗಿ ಗಾಯಗೊಳ್ಳುತ್ತಾನೆ. ಆದರೆ ಹತ್ತು ಮಹಡಿ ಎತ್ತರದಿಂದ ಬಿದ್ದೂ ಏನೂ ಗಾಯಗಳಾಗದೆ ಪಾರಾದವರಿದ್ದಾರೆ. ಅವರನ್ನು ರಕ್ಷಿಸಿರುವುದು ನಿಜಕ್ಕೂ ಏನು ? ದೇವರನ್ನಲ್ಲದೆ ಬೇರಾವ ಕಾರಣವನ್ನೂ ಈ ವಿಷಯದಲ್ಲಿ ತೋರಿಸಲು ನನಗೆ ಸಾಧ್ಯವಾಗಲಾರದು.

ದೇವರಿಲ್ಲವೆಂದು ಹೇಳುವುದು ಇಂದು ಒಂದು ಫ್ಯಾಶನ್ ಆಗಿದೆ. ತಾವು ವೈಜ್ಞಾನಿಕ ಮನೋಭಾವದವರೆಂದು ತೋರಿಸಿಕೊಳ್ಳುವುದಕ್ಕಾಗಿಯೇ ಹಲವರು ದೇವರ ಅಸ್ಥಿತ್ವವನ್ನು ಅಲ್ಲಗಳೆಯುತ್ತಿದ್ದಾರೆ. ವೈಜ್ಞಾನಿಕ ಮನೋಭಾವವೆಂದರೆ ಸುಮ್ಮ ಸುಮ್ಮನೆ ದೇವರ ಅಸ್ತಿತ್ವವನ್ನು ಅಲ್ಲಗಳೆಯುವುದಲ್ಲ. ಬದಲಾಗಿ ದೇವರ ಅಸ್ಥಿತ್ವವನ್ನು ಅರಿತುಕೊಳ್ಳಲು ಮತ್ತಷ್ಟು ಪ್ರಯತ್ನ ನಡೆಸುವುದೇ ಆಗಿದೆ. 16ನೇ ಶತಮಾನದಲ್ಲಿ ಯಾರಾದರೂ ಚಂದ್ರನ ಮೇಲೆ ಮಾನವ ಕಾಲಿಡುವ ವಿಷಯದ ಕುರಿತು ಮಾತೆತ್ತಿದರೆ ಅಂತವರು ಹಾಸ್ಯಕ್ಕೆ ಗುರಿಯಾಗುತ್ತಿದ್ದರು. ಆದರೆ 20ನೇ ಶತಮಾನದಲ್ಲಿ ಚಂದ್ರನ ಮೇಲೆ ಕಾಲಿಡುವ ಮಾನವನ ಆಸೆ ಪೂರೈಸಿತು. ಸತತ ಪ್ರಯತ್ನವೇ ಈ ಆಸೆಪೂರೈಸಲು ಕಾರಣವಾಯಿತೆನ್ನುವುದನ್ನು ನಾವೆಂದೂ ಮರೆಯಬಾರದು. ದೇವರ ಅಸ್ಥಿತ್ವವನ್ನು ಅರಿತುಕೊಳ್ಳಲು ಸತತ ಪ್ರಯತ್ನದ ಅವಶ್ಯಕತೆಯೊಂದಿಗೆ ಭಕ್ತಿ, ಸತ್ಕಾರ್ಯ, ಉತ್ತಮ ಗುಣ ನಡತೆಗಳು ಬೇಕೇ ಬೇಕು.

● **ಬೈತಡ್ಕ ಕೆ. ಶ್ರೀಧರ್**, ಪುತ್ತೂರು

'ಕೊಡಗು ಪ್ರತ್ಯೇಕತೆ' ಬಗ್ಗೆ ಸಮಾಜಗಳ ನಿಲುವು

ಪ್ರತ್ಯೇಕ ಕೊಡಗು ರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹೋರಾಟ ನಡೆಸುತ್ತಿರುವುದರ ಬಗ್ಗೆ ಜನಾಂಗದ ನಿಲುವನ್ನು ತಿಳಿದುಕೊಳ್ಳಲು ಕೊಡಗು ಗೌಡ ಸಮಾಜ ಮಡಿಕೇರಿ, ಇವರು ತಾರೀಖು 12–12–97 ರಂದು ಕರೆದ ಹಲವು ಸಮಾಜ ಪ್ರತಿನಿಧಿಗಳ ಒಕ್ಕೂಟದಲ್ಲಿ ವಿಷಯ ಚರ್ಚಿಸಿ ಕೈಗೊಂಡ ಈ ಕೆಳಗಿನ ಸರ್ವಸಮ್ಮತ ನಿರ್ಣಯವನ್ನು ಜನಾಂಗದ ಬಂಧುಗಳಿಗೆ ಈ ಮೂಲಕ ತಿಳಿಸುತ್ತಿದ್ದೇವೆ.

ನಿರ್ಣಯ

1. ಕೊಡಗಿನಲ್ಲಿ ನೂರಾರು ವರ್ಷಗಳಿಂದ ವಾಸಿಸುವ ಎಲ್ಲಾ ಕೋಮಿನವರು ಸ್ನೇಹ, ಸೌಹಾರ್ದತೆ, ಮತ್ತು ಸಹಬಾಳ್ವೆಯಿಂದ ಶಾಂತಿಯುತವಾಗಿ ಅನ್ಯೋನ್ಯವಾಗಿ ಜೀವಿಸುತ್ತಾ ಬಂದಿದ್ದೇವೆ. ಈ ಕೊಡಗು ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಕಲೆಗಳಿಗೆ ಹೆಸರಾಗಿರುವ ಜಿಲ್ಲೆಯಾಗಿರುತ್ತದೆ. ಕೊಡಗಿನಲ್ಲಿ ವಿಭಿನ್ನ ಕೋಮಿನ ಜನರು ವಾಸಿಸುತ್ತಿದ್ದು, ಸ್ನೇಹ, ಸೌಹಾರ್ದತೆ' ಸಹನೆ, ಆಥಿತ್ಯ, ಸಂಪ್ರಾದಾಯ ವಿಭಿನ್ನವಾಗಿದ್ದು ರಾಷ್ಟ್ರದಲ್ಲಿಯೇ ಮೆಚ್ಚುಗೆಯನ್ನು ಪಡೆದು ಅಂತರಾಷ್ಟ್ರೀಯ ಕೀರ್ತಿಯನ್ನು ಪಡೆದಿರುತ್ತಾರೆ ಎಂಬುದು ನಮಗೆ ಹೆಮ್ಮೆಯ ವಿಷಯವಾಗಿರುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಕೆಲವು ಹಿತಾಸಕ್ತಿಗಳಿಂದ ಹೋರಾಟ ನಡೆಯುತ್ತಿರುವುದು ದುರಾದೃಷ್ಟಕರ. ಈ ಹೋರಾಟದಿಂದ ಕೊಡಗಿನಲ್ಲಿ ವಾಸಿಸುವ ಜನರಲ್ಲಿ ಒಂದು ತರಹದ ವಿಶ್ವಾಸದ ಕೊರತೆ, ಅಶಾಂತಿ, ಅಭದ್ರತೆ ಮತ್ತು ಅನ್ಯೋನ್ಯತೆಗೆ ಧಕ್ಕೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಪ್ರತ್ಯೇಕತೆಯ ಬೇಡಿಕೆಯ ಹೋರಾಟವನ್ನು ನಡೆಸುತ್ತಿರುವವರು ತುಂಬು ಹೃದಯದಿಂದ ಈ ಬಗ್ಗೆ ಮತ್ತೊಮ್ಮೆ ಸಮಾಲೋಚನೆ ಮಾಡಿ ಕೊಡಗಿನ ಸಮಸ್ತ ಜನತೆಯ ಹಿತದೃಷ್ಟಿಯಿಂದ, ಕೊಡಗಿನ ಪ್ರತ್ಯೇಕತೆಯ ಹೋರಾಟವನ್ನು ತಟಸ್ಥ ಪಡಿಸುವುದು ಸೂಕ್ತ ಎಂದು ವಿನಂತಿಸಲು ತೀರ್ಮಾನಿಸಲಾಯಿತು.

2. ಕೊಡಗು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದ ಹೋರಾಟಗಳಿಗೆ ಪೂರ್ಣ ಬೆಂಬಲವನ್ನು ಈ ಒಕ್ಕೂಟ ಒಕ್ಕೊರಲಿನಿಂದ ಒತ್ತಾಯಿಸುತ್ತದೆ.

3. ಈ ಮೇಲ್ಕಂಡ ವಿಷಯದ ಬಗ್ಗೆ ಸರಕಾರದ ಗಮನ ಸೆಳೆಯುವಂತೆ ತೀರ್ಮಾನಿಸಲಾಯಿತು.

● **ಗೌಡ ಸಮಾಜ,** ಮಡಿಕೇರಿ.

ಪನ್ನಂಗಾಲತಮ್ಮೆ [ಕೊಡಗಿನ ಜನಪದ ಕಥೆ]

ಕೊಡಗಿನ ಪ್ರಖ್ಯಾತ ದೇವಾಲಯವಾದ ಪಾಡಿ ಇಗ್ಗುತಪ್ಪ ದೇವಸ್ಥಾನದ ಕಥೆಯನ್ನು ನಮ್ಮ ಹಿರಿಯರು ಹೇಳುತ್ತಿದ್ದುದನ್ನು ಈಗಿನ ಪೀಳಿಗೆಗೆ ತಿಳಿಯಲೆಂದು ಬರೆದಿದ್ದೇನೆ. ಹಿಂದೆ ಮಲೆಯಾಳದ ವೈನಾಡಿನಲ್ಲಿ ಇಗ್ಗುತಪ್ಪ, ಪಾಲೂರಪ್ಪ, ಮಾದೂರಪ್ಪ ಕಾಂಞರಾಟಪ್ಪ, ತಿರುಚಂದ್ರಪ್ಪ, ಬೇಂದ್ರುಕೋಲಪ್ಪ ಮತ್ತು ಇವರುಗಳ ತಂಗಿ [ಪನ್ನಂಗಾಲತಮ್ಮ] ಹೀಗೆ ಏಳು ಜನರು ಊರನ್ನು ಸುತ್ತಿಕೊಂಡು ಬಂದು ಪಾಡಿನಾಲ್ಕು ನಾಡಿನ ಬೆಟ್ಟಕ್ಕೆ ಬಂದು ಕುಳಿತು,ಅಲ್ಲಿನ ಪ್ರಕೃತಿಸೌಂಧರ್ಯವನ್ನು ನೋಡಿ ಸಂತೋಷಪಟ್ಟು ಆ ಬೆಟ್ಟದಿಂದ ಹರಿದು ಬರುವ ಕಕ್ಕಬ್ಬೆ ಹೊಳೆಯ ಹತ್ತಿರ ಬಂದು ಕುಳಿತರು. ಆಗ ಬೇಸಿಗೆಯ ತಾಪ ಜೋರಾಗಿತ್ತು.

ಅಲ್ಲಿ ಕುಳಿತವರಿಗೆ ಹಸಿವು ಸುರುವಾಯಿತು. ಆಗ ತಂಗಿಯಾದವಳು ತನ್ನ ಅಣ್ಣಂದಿರಿಗೆ, ಚಿಂತಿಸಬೇಡಿ ನಾನು ಪಕ್ಕದ ಮನೆಗೆ ಹೋಗಿ ಅಕ್ಕಿ ಮತ್ತು ಅನ್ನ ಮಾಡುವ ಮಡಿಕೆಯನ್ನು ತರುತ್ತೇನೆಂದು ಹೇಳಿ, ಅನ್ನ ಮಾಡುವ ಮಡಿಕೆಯನ್ನು ತಂದಳು. ಆ ಮಡಿಕೆಯಿಂದ ಅಲ್ಲಿಯೇ ಮೇಯುತ್ತಿದ್ದ ಒಂದು ಹಸುವಿನಿಂದ ಹಾಲು ಕರೆದು ತಂದಳು. ಆದರೆ ಬೆಂಕಿ ಮಾಡಲು ಸೌದೆ ಇಲ್ಲ, ಬೆಂಕಿ ಇಲ್ಲ. ಆಗ ತಂಗಿಯಾದವಳು ಅಲ್ಲಿಯೇ ಇದ್ದ ಮರಳು ದಂಡೆಯನ್ನು ಗುಡ್ಡೆ ಮಾಡಿ, ಅದರಲ್ಲಿ ಹಾಲು ಇರುವ ಅನ್ನದ ಮಡಿಕೆಯನ್ನು ಆ ಮರಳಿನ ರಾಶಿಯ ಮೇಲ್ಭಾಗದಲ್ಲಿ ಹೂತಿಟ್ಟಳು. ಕುದಿಯುವ ಹಾಲಿಗೆ ಅಕ್ಕಿಯನ್ನು ಹಾಕಿ ಅನ್ನ ತಯಾರಿಸಿದಳು. ಆದರೆ ಊಟ ಮಾಡಲು ಬಾಳೆ ಎಲೆ ಇಲ್ಲದ್ದರಿಂದ ಅಣ್ಣಂದಿರಲ್ಲಿ ಹಿರಿಯವನಾದ ಇಗ್ಗುತಪ್ಪ ಅಲ್ಲಿಯೇ ಹತ್ತಿರದಲ್ಲಿದ್ದ ಪರದಂಡ ಮನೆಯವರ ಬಾಳೆ ತೋಟಕ್ಕೆ ಹೋಗಿ ಬಾಳೆ ಕುಯ್ಯುವಾಗ ಆ ಮನೆಯ ಉಮ್ಮವ್ವ ಎಂಬುವಳು ಇದನ್ನು ಕಂಡು ಬಾಯಿಗೆ ಬಂದಂತೆ ಇಗ್ಗುತಪ್ಪನಿಗೆ ಬೈದಳು. ಆಗ ಇಗ್ಗುತಪ್ಪನಿಗೆ ಸಿಟ್ಟು ಬಂದು, "ನಿಮ್ಮ ತೋಟದಲ್ಲಿ ಬಾಳೆಯೇ ಬೆಳೆಯದೆ ಹೋಗಲಿ" ಎಂದು ಶಾಪ ಹಾಕಿದ.

ಈ ವಿಷಯವನ್ನು ತಿಳಿದ ಮನೆಯ ಯಜಮಾನನು ಇಗ್ಗುತಪ್ಪ ಕುಳಿತಲ್ಲಿಗೆ ಬಂದು, ತನ್ನ ಮನೆಯವಳು ಬೈದುದ್ದು ತಪ್ಪಾಯಿತು ಕ್ಷಮಿಸಬೇಕೆಂದು ಕೇಳಿಕೊಂಡ ಮೇರೆಗೆ ಶಾಪವನ್ನು ಹಿಂದಕ್ಕೆ ತೆಗೆದುಕೊಂಡನೆಂದು ಹೇಳಿದರೂ ಪರದಂಡ ತೋಟದಲ್ಲಿ ಇಂದಿಗೂ ಬಾಳೆ ಬೆಳೆ ಚೆನ್ನಾಗಿ ಆಗುವುದಿಲ್ಲ. ಇದಕ್ಕೆ ಕಾರಣ, ಇಗ್ಗುತಪ್ಪ ಕೊಟ್ಟ ಶಾಪದ ಫಲ ಇನ್ನೂ ಹೋಗಿಲ್ಲವೆಂದು ಜನರಾಡಿಕೊಳ್ಳುತ್ತಾರೆ. ಈ ರೀತಿಯಾಗಿ ಊಟ ಮಾಡುತ್ತಿದ್ದಾಗ ಊಟಕ್ಕೆ ಉಪ್ಪಿಲ್ಲದ್ದರಿಂದ, ಉಪ್ಪಿಲ್ಲದ ಊಟ ನಗುಮೋರೆ ಸಪ್ಪೆ" ಎಂಬುದಾಗಿ ಪಾಲೂರಪ್ಪ ಅನ್ನದ ಅಗಳನ್ನು ಮೇಲಕ್ಕೆ ಮಳೆ ಮಳೆ ಬಾ ಎಂದು ಎಸೆದಾಗ ತಂಗಿ "ಇದೋ ಮಳೆಗಾಲದ ಗುಡುಗು" ಎಂದೂ ಹೇಳಿ ಪಾಲೂರಪ್ಪನ ಬೆನ್ನಿಗೆ ಅನ್ನದ ಸೌಟನಲ್ಲಿ ಹೊಡೆದಳು. ಉಳಿದವರು ಇದನ್ನು ನೋಡಿ ತಂಗಿಗೆ ಬುದ್ಧಿ ಕಲಿಸಬೇಕೆಂದು ಊಟವಾದ ಮೇಲೆ ತಾಂಬೂಲ ಜಗಿದು ಯಾರ ತಾಂಬೂಲ ಕೆಂಪು ಎಂದು ಎಲ್ಲರೂ ತಮ್ಮ ತಮ್ಮ ತಾಂಬೂಲವನ್ನು ಎಡಗೈಗೆ ಉಗುಳಿ ನನ್ನದು ಕೆಂಪು, ನನ್ನದು ಕೆಂಪು ಎಂದು ಹೇಳಿ ತಾಂಬೂಲವನ್ನು ಹಿಂದಕ್ಕೆ ಬಿಸಾಡಿದರು. ಆದರೆ ತಂಗಿಯಾದವಳು ಆ ಎಂಜಲು ತಾಂಬೂಲವನ್ನು ಬಾಯಿಗೆ ಹಾಕಿದಾಗ ಮಾದೂರಪ್ಪನು "ತಂಗಿಯ ಜಾತಿ ಹೋಯಿತು, ತಂಗಿಯ ಜಾತಿ ಹೋಯಿತು" ಎಂಬುದಾಗಿ ಜೋರಾಗಿ ನಕ್ಕ. ಆದುದರಿಂದ ತಂಗಿಯಾದ ನಿನ್ನನ್ನು ಹೊಲೆಯರು ಪೂಜಿಸಬೇಕು, ನಮ್ಮೊಡನೆ ಕೂಡದು ಎಂದು ಹೇಳಿದರು.

ಆಗ ಹಿರಿಯ ಅಣ್ಣನಾದ ಇಗ್ಗುತಪ್ಪ ತಂಗಿಯ ಮೇಲೆ ಕನಿಕರ ಪಟ್ಟು, ಒಂದು ಬಾಣವನ್ನು ಅಲ್ಲಿಯೇ ಹತ್ತಿರವಿರುವ ಬೆಟ್ಟಕ್ಕೆ ಬಿಟ್ಟಾಗ, ಅದು ಅಲ್ಲಿಯೇ ಊರಿದುದರಿಂದ ತಾನು ಆ ಬೆಟ್ಟದಲ್ಲಿ ನೆಲೆಸುವುದಾಗಿಯೂ, ತಂಗಿಯಾದ ನೀನು ನನ್ನ ಹತ್ತಿರವೇ ಇರು ಎಂದು ಹೇಳಿದ. ಅದೇ ರೀತಿ ತಂಗಿಯೂ ಬಿಟ್ಟ ಬಾಣ ಪನ್ನಂಗಾಲ ಊರಿಗೆ ಹೋಗಿ ಬಿದ್ದುದರಿಂದ ಅಲ್ಲಿ ತಂಗಿ ಹೋಗಿ ನೆಲೆಸುವಂತೆ ತೀರ್ಮಾನಿಸಿ ನೆಲೆಸಿದುದರಿಂದ ಅವಳನ್ನು ನಂತರ "ಪನ್ನಂಗಾಲತಮ್ಮ" ಎಂಬುದಾಗಿ ಜನರು ಕರೆಯಲು ಪ್ರಾರಂಭಿಸಿದರು. ಈಗ ಇವಳನ್ನು ಹರಿಜನರು ಪೂಜಿಸುತ್ತಾರೆ.

ಅದೇ ರೀತಿ ಇಗ್ಗುತಪ್ಪ ಹೊಡೆದ ಬಾಣದ ಬೆಟ್ಟಕ್ಕೆ [ಕುಂದು] ಇಗ್ಗುತಪ್ಪನ ಕುಂದು ಎಂದು ಕರೆದು, ಅಲ್ಲಿ ಇಗ್ಗುತಪ್ಪ ದೇವಸ್ಥಾನವನ್ನು ಕಟ್ಟಿ ಇಗ್ಗುತಪ್ಪನನ್ನು ಪೂಜಿಸುತ್ತಾರೆ. ಇದೇ ರೀತಿ ಪಾಲೂರಪ್ಪ ಬಿಟ್ಟ ಬಾಣವು ಪಾಲೂರು ಗ್ರಾಮಕ್ಕೆ ಬಿದ್ದುದರಿಂದ ಆ ಊರಿನಲ್ಲಿ ಪಾಲೂರಪ್ಪನ ದೇವಸ್ಥಾನ ಕಟ್ಟಿಸಿದರು. ಮಾದೂರಪ್ಪನು ಬಿಟ್ಟ ಬಾಣವು ಮದೆನಾಡಿಗೆ ಬಂದು ಬಿದ್ದುದರಿಂದ ಅಲ್ಲಿ ಮಾದೂರಪ್ಪನ ದೇವಸ್ಥಾನ ಕಟ್ಟಿಸಿದರು. ಇಗ್ಗುತಪ್ಪ, ಪಾಲೂರಪ್ಪ, ಮಾದೂರಪ್ಪ, ಪನ್ನಂಗಾಲತಮ್ಮ ಕೊಡಗಿನಲ್ಲಿ ನೆಲೆಸಿದರು. ಕಾಂಞರಾಟಪ್ಪ ಮಲೆಯಾಳದಕಾಂಞಂಗಾಡಿಗೆ ಬಾಣ ಬಿಟ್ಟು ಅಲ್ಲಿ ನೆಲೆಸಿದನು. ತಿರುಚಂದ್ರಪ್ಪನು ತಮಿಳುನಾಡಿನ ತಿರುಚಂದೂರಿನಲ್ಲಿ ಹಾಗೂ ಬೇಂದ್ರಕೋಲಪ್ಪ

ನು ಬೇಂದ್ರಕೋಲ್ ಎಂಬ ಸ್ಥಳಕ್ಕೆ ಬಾಣ ಬಿಟ್ಟು ಆ ಸ್ಥಳದಲ್ಲಿ ನೆಲೆಸಿದ ನೆಂದು ಹೇಳುತ್ತಾರೆ.

ಪನ್ನಂಗಾಲತಮ್ಮೆಯು ಈ ರೀತಿ ಅಣ್ಣಂದಿರನ್ನು ಬಿಟ್ಟು ಕೊಕ್ಕರೆಯ ರೂಪ ತಾಳಿ ಕರ್ತಂಡ ಕುಟುಂಬದ ಗದ್ದೆಯಲ್ಲಿ ಕುಳಿತಳು. ಆಗ ಒಬ್ಬಳು ಹೆಂಗಸು ಒಂದು ಕುಕ್ಕೆಯಲ್ಲಿ ಸಗಣಿಯನ್ನು ಹೊತ್ತುಕೊಂಡು ಗದ್ದೆಗೆ ಹಾಕಲು ಬರುತ್ತಿದ್ದಾಗ ಈ ಕೊಕ್ಕರೆಯು ಮುಂದೆ ಮುಂದೆ ಹೋಗುತ್ತಿದ್ದಾಗ, ಆ ಹೆಂಗಸು ಕೊಕ್ಕರೆ ಮೇಲೆ ಸಗಣಿ ಕುಕ್ಕೆಯನ್ನು ಹಾಕಿದಾಗ ಈ ಕೊಕ್ಕರೆ ರೂಪದ ಪನ್ನಂಗಾಲತಮ್ಮೆಯು ಹೆಂಗಸಿನ ಮೈಮೇಲೆ ಆವೇಶ ಬಂದು ತನಗೆ ನೆಲೆಸಲು ಸ್ಥಾನ ಕೊಡಬೇಕೆಂದು ಕೇಳಿದ ಪ್ರಕಾರ ಕರ್ತಂಡ ಮನೆಯವರ ಗದ್ದೆಯಲ್ಲಿ ಸ್ಥಾನ ಕಲ್ಪಿಸಿ, ಅಲ್ಲಿ ಒಂದು ದೇವಸ್ಥಾನ ಕಟ್ಟಿಸಿದರು. ಇಲ್ಲಿನ ಪೂಜಾರಿಗಳು ಹರಿಜನರಾದರೂ. ಎರಡು ವರ್ಷಕ್ಕೊಮ್ಮೆ ಇಗ್ಗುತಪ್ಪ ದೇವಸ್ಥಾನದ ಕಣಿಯರೇ ಪನ್ನಂಗಾಲತಮ್ಮೆಗೆ ಹೊಸ ಕೊಡೆಯನ್ನು ಮಾಡಿಕೊಡುತ್ತಾರೆ. ಪನ್ನಂಗಾಲತಮ್ಮೆ ಹಬ್ಬದಲ್ಲಿ ಕರ್ತಂಡ ಮನೆಯವರೆ ತಕ್ಕರಾಗಿರುತ್ತಾರೆ. ಪ್ರತಿ ವರ್ಷವು ಪನ್ನಂಗಾಲತಮ್ಮೆ ಜಳಕ [ಸ್ನಾನ] ಮಾಡಿದ ನಂತರ ಇಲ್ಲಿ ಹೊಲೆಯರ ಬಾಯಿ ವಾಸನೆ ಬರುತ್ತದೆ. ನಾನು ನಿನ್ನ ಹತ್ತಿರ ಬರುತ್ತೇನೆ ಎಂದು ಇಗ್ಗುತಪ್ಪ ಬೆಟ್ಟದ ಕಡೆ ಮುಖ ಮಾಡಿ ಜೋರಾಗಿ ಕರೆದು ದುಃಖಿಸುತ್ತಾಳೆ. ದುಃಖಿಸುತ್ತಾ ಓಡುತ್ತಾಳೆ. ಆಗ ಹಿಂದೆ ಕೊಕ್ಕರೆ ರೂಪ ತಾಳಿ ಕುಳಿತ್ತಿದ್ದ ಸ್ಥಳಕ್ಕೆ ಹೋಗುವುದಕ್ಕೆ ಮೊದಲು ಕೊಕ್ಕರೆಯಾಗಿ ಕುಳಿತ ಸ್ಥಳದಲ್ಲಿ ಹೊಲಸು ಪದಾರ್ಥವನ್ನು ಹಾಕುತ್ತಾರೆ. ಹಾಗಾಗಿ ಪನ್ನಂಗಾಲತಮ್ಮೆ ಹಿಂದಿರುಗುತ್ತಾಳೆ. ಈ ಸಮಯದಲ್ಲಿ ಇಗ್ಗುತಪ್ಪ ಬೆಟ್ಟ ಮೋಡ ಕವಿದು ಕಪ್ಪಾಗಿರುತ್ತದೆ. ಇದು ಇಲ್ಲಿನ ವಿಶೇಷತೆ. ತಂಗಿಯ ಈ ಕಷ್ಟವನ್ನು ನೋಡಿ ದುಃಖವಾಗಿರುವುದರಿಂದ ಈ ರೀತಿ ಬೆಟ್ಟ ಕವಿದುಕೊಳ್ಳುತ್ತದೆ. ಎಂದು ಈಗಲೂ ವಾಡಿಕೆಯಲ್ಲಿ ಇದೆ. ಈ ಹಬ್ಬ ಪ್ರತಿವರ್ಷ ಏಪ್ರಿಲ್ 10, 11, 12ರಲ್ಲಿ ನಡೆಯುತ್ತದೆ.

● **ಮುಕ್ಕಾಟಿ ಸುಬ್ರಾಯ** ಬಿಳಿಗೇರಿ.

ಆತ್ಮೀಯತೆ

ನನ್ನ ನಿನ್ನೊಂದಿಗಿನ ಆತ್ಮೀಯತೆ
ಮಾತಿನಿಂದ ಬಂದದ್ದಲ್ಲ, ಮನಸ್ಸಿ
ನಾಳದಿಂದ ಹೊರಹೊಮ್ಮಿದ್ದು
ಇದು ನನ್ನ ಬಹಳ ಖಾಸಗಿಯೆನಿಸಿದ್ದು,
ಬರೀ ನನ್ನ ಮನಸ್ಸಿನ ಭಾವನೆ
ಗಳಿಗೆ ಸಂಬಂಧಿಸಿದ್ದು

ನನ್ನ ನಿನ್ನೊಂದಿಗಿನ ಆತ್ಮೀಯತೆ
ಬಲವಂತದಿಂದ ಹುಟ್ಟಿದ್ದಲ್ಲ,
ಇನ್ನೊಬ್ಬರ ಪ್ರವೇಶದಿಂದ ಕಡಿದು
ಹೋಗುವಂತದ್ದಲ್ಲ, ಮರೆಯು
ವಂತದ್ದಲ್ಲ, ಇದು ನನ್ನ ನಿನ್ನ
ಮನಸ್ಸಿನ ಭಾವನೆಗೆ ಸಂಬಧಿಸಿದ್ದು

ನನ್ನ ನಿನ್ನೊಂದಿಗಿನ ಆತ್ಮೀಯತೆಗೆ
ಸ್ವಾರ್ಥದ ಸಿಂಚನೆಯಿಲ್ಲ,
ವ್ಯಾಮೋಹವಿಲ್ಲ, ಉದ್ರೇಕವಿಲ್ಲ,
ಉತ್ಕಟತೆಯಿಲ್ಲ, ಅಂಜಿಕೆಯಿಲ್ಲ,
ತೋರ್ಪಡಿಕೆಗೆ ನಿಲುಕುವಂತದ್ದಲ್ಲ

ನನ್ನ ನಿನ್ನೊಂದಿಗಿನ ಆತ್ಮೀಯತೆಗೆ
ಇನ್ನೊಬ್ಬರ ತ್ಯಾಗದ, ಅನುಕರಣೆಯ
ಅಗತ್ಯವೂ ಇಲ್ಲ, ಸಾಕ್ಷ್ಯಾಧಾರಗಳು
ಬೇಕಿಲ್ಲ, ನನ್ನ ಆತ್ಮಕ್ಕೆ ಮೆಚ್ಚುಗೆ
ಆಗುವಂತಿದ್ದರೆ ಸಾಕು

ನನ್ನ ನಿನ್ನೊಂದಿಗಿ ಆತ್ಮೀಯತೆ
ಸದಾ ಶುಭ್ರ, ಸದಾ ಹಸಿರು,
ಹಕ್ಕಿಗಳ ಇಂಚರದಂತೆ
ಗುಡುಗು ಮಿಂಚಿನಂತೆ ಕೆಲವೊಮ್ಮೆ
ಅನಿಸಿದರೂ, ಬೀಸಿ ಬರುವ
ತಂಗಾಳಿಯಂತೆ ಸದಾ ಹಿತ, ಶಾಶ್ವತ

● **ಕೇದಂಬಾಡಿ ಜಿ. ಶಾಂತಿ,** ವಕೀಲರು, ಮಡಿಕೇರಿ.

ದೀಪ

ಕರ ನೇರಿಲಿನ ಹಣತೆ
ಮೊರೆಯಿಡುತ್ತಿದೆ ಕರುಳ ಕುಡಿಗಾಗಿ
ಬೆಳಕಿಂದ ಕಾಣುತಿದೆ
ಕೊರಳ ಕರಿಮಣಿ ಸರ
ಮುತ್ತೈದೆಗೆ ಶೋಭೆ ಕುಂಕುಮದ ಬಟ್ಟು
ಕಷ್ಟ, ಸುಖಗಳೆರಡು ಆಭರಣ
ಹಬ್ಬದಾಚರಣೆಯ ವಸ್ತ್ರ
ಮಿಂದ ಮಡಿಯಲ್ಲಿ
ದೇವರ ಸನ್ನಿಧಿಗೆ
ಬಾಳ ಬೆಳಕಿಗಿದು
ಉರಿಯುತ್ತಿದೆ ದೀಪ

ಕಾಳಿಕೋಟಿ ಜಾಜಿ ಬೋಪಯ್ಯ, B.M.H.ಮೈಸೂರು.

ಕರಿಯ ಕಾಸಿಂಗ–ಬಿಳಿಯ ದೇಸಿಂಗ

ಈ ಸಹೋದರರು ಕ್ರಿ.ಶ. ಮೂರನೆ ಶತಮಾನದಲ್ಲಿ ಬೋಳದ ಕಾಡಿನಲ್ಲಿ [ಕಾರ್ಕಳ ಹತ್ತಿರ] ಇದ್ದರೆಂದು ದಿ|| ಎನ್. ಎಸ್. ಕಿಲ್ಲೆ ಮತ್ತು ದಿ|| ಪೊಳಲಿಶೀನಪ್ಪ ಹೆಗ್ಗಡೆ ಬರೆದಿರುವ ಪ್ರಾಚೀನ ತುಳುನಾಡು"ನಲ್ಲಿ ಕಾಣಸಿಕೊಳ್ಳುತ್ತದೆ. ಇವರು ನಾಗರಾಜನ ವರ [ಅಪ್ಪಣೆ] ಪಡೆದು ತುಳುನಾಡಿನಲ್ಲಿ ಬಂದವರು [ಹುಟ್ಟಿದವರು] ಎಂಬುವದನ್ನು ಗಮನಿಸುವಾಗ ಇವರು ಪೂಮಾಣೆ-ಕಿನ್ನಿಮಾಣಿಯ ಕರಾವಳಿಯ ಅವತರಣವೇ ಎನ್ನುವ ಸಂಶಯ ಹುಟ್ಟಿಸುತ್ತದೆ. ತುಳುನಾಡು ನಾಗಲೋಕವೆಂದು ಪುರಾಣದಲ್ಲಿದೆ.

ಇವರು ಶಿವಭೂತರೆಂದೂ ಅಬ್ಬನಡ್ಕದ ಕಾಡಿನಲ್ಲಿ ಬಿಳಿಕೇಪಳದ ಬುಡದಲ್ಲಿದ್ದ ಕೆರೆಯ ತಾವರೆ ಹೂವಿನಲ್ಲಿ ಹುಟ್ಟಿ ಅವರಷ್ಟಕ್ಕೆ ಬೆಳೆದು ದೊಡ್ಡವರಾದವರೆಂದು ತಿಳಿಯಲಾಗಿದೆ. ಅವರು ನೆಲ್ಲಿ ಮರದಿಂದ 3 ನೆಲ್ಲಿಕಾಯಿಯನ್ನು ಕೊಯ್ದು ಒಂದು ನೆಲ್ಲಿಕಾಯಿ ಎಸೆದು, 12 ಅಂಕಣದ ಅರಮನೆ, ಇನ್ನೊಂದು ನೆಲ್ಲಿಕಾಯಿಎಸೆದು ಒಳ ಅಂಗಳದಲ್ಲಿ ಬಾವಿ,ಮೂರನೇ ನೆಲ್ಲಿಕಾಯಿಯಿಂದಹೊಲ, ಪ್ರಜೆ, ಪರಿವಾರ ಪಡೆಯುತ್ತಾರೆ. ಎಂಟು ಗುತ್ತಿನವರನ್ನು ಮಂತ್ರಿಗಳಾಗಿ, ಎಂಟು ಗುತ್ತಿನವರನ್ನು ಸೇನಾಧಿಪತಿಗಳಾಗಿ ನೇಮಿಸುತ್ತಾರೆ. ಬಾಕಿ ಮೂರು ಗದ್ದೆಯಲ್ಲಿ ಕಂಬಳ ನಡೆಸುತ್ತಾರೆ.

ಸಹೋದರರು ಕೆಡ್ಡಸ ಹಬ್ಬದಂದು ಹಾಡಿಕೆಯಂತೆ ಬೇಟೆಗೆ ಹೋಗುತ್ತಾರೆ. ಆ ಕಾಡಿನಲ್ಲಿ ತನ್ನ ಗಂಡನಿಗೆ ಬರಕೊಟ್ಟ [ವಿವಾಹ ವಿಚ್ಛೇದನ] ತುಳುನಾಡ ಸಿರಿ ಎಂದು ಪ್ರಖ್ಯಾತಳಾದಾಕೆ ತನ್ನ ಮಗು ಕುಮಾರನನ್ನು ಒಂದು ಮರಕ್ಕೆ ತೊಟ್ಟಿಲು ಕಟ್ಟಿ ರಾಮರಾಗ ಹಾಡುತ್ತಾಳೆ. ಹಾಡಿಗೆ ಆಕರ್ಷಿತರಾಗಿ ಸಹೋದರರು ಆಕೆ ಇದ್ದಲ್ಲಿಗೆ ಹುಡುಕಿಕೊಂಡು ಹೋಗುತ್ತಾರೆ. ಅವಳು ಅಣ್ಣಂದಿರೆಂದು ಅವರನ್ನು ಸಂಭೋದಿಸಿ ತನ್ನ ದುಃಖದ ಕತೆಯನ್ನು ಹೇಳುತ್ತಾಳೆ. ಅಂತೆಯೇ ಆಕೆಯನ್ನು ತಂಗಿಯಾಗಿ ಸ್ವೀಕರಿಸುತ್ತಾರೆ. ಅರಮನೆಗೆ ಕರೆದಾಗ "ಕ್ಷತ್ರಿಯ ರಾಜರನ್ನು ಕೂಡಿಕೊಂಡು ಬಂದ ಸೊಕ್ಕಿನ ಹೆಣ್ಣು ಎಂದು ಜನರು ನನ್ನನ್ನು ಹಂಗಿಸಬಹುದು"ಎಂದು ಹೇಳಿ ಊರಿನ ಜನರನ್ನು ಕೂಡಿಕೊಂಡು ಬಂದು ತಂಗಿಯನ್ನು ಕರೆದುಕೊಂಡು ಹೋಗುವ ಕ್ರಮದಲ್ಲಿ ಕರೆಸಿಕೊಳ್ಳಲು ಹೇಳುತ್ತಾಳೆ. ಅದೇ ಪ್ರಕಾರ ಸಹೋದರರು ಹೋಗಿ ಮತ್ತೆ ಪ್ರಜೆಗಳೊಂದಿಗೆ ಬಂದು ವೈಭವದ ಮೆರವಣಿಗೆಯಲ್ಲಿ ಆಕೆಯನ್ನು ಕರೆದೊಯ್ಯುತ್ತಾರೆ.

ಕೊಟ್ರಾಡಿ ಕೊಡ್ಸರಾಳುನೆಂಬ ಈ ಸಹೋದರರ ಸ್ನೇಹಿತ ಬೋಳದ ಅರಮನೆಗೆ ಬರುತ್ತಾನೆ. ಪರದೆ ಹಿಂದಿನಿಂದ ಗಿಂಡಿಯಲ್ಲಿ ಹಾಲು ಕೊಡುವಾಗ ಅವಳ ಮುಂಗೈಯನ್ನು ನೋಡಿ ಕೊಡ್ಸರಾಳ್ವ ಮರುಳಾಗುತ್ತಾನೆ. ಆಕೆಯನ್ನು ತನಗೆ ಮದುವೆ ಮಾಡಿಕೊಡಿರೆಂದು ಅಣ್ಣಂದಿರನ್ನು ಕೇಳಿಕೊಳ್ಳುತ್ತಾನೆ. ಹಾಗೆಯೇ ಅವರು ಆಕೆಯನ್ನು ಒಪ್ಪಿಸಿ ಮದುವೆ ಮಾಡುತ್ತಾರೆ.

ಕೊಡ್ಸರಾಳ್ವನಿಗೆ ಮೊದಲೇ ಸೋಮಳ್ವದಿ ಎಂಬಾಕೆಯೊಡನೆ ಮದುವೆ ಆಗಿತ್ತು. ಆಕೆ ವಿಚಾರ ತಿಳಿದು ಚಾವಡಿ ದೀಪ ಹಚ್ಚಿಟ್ಟು ಈ ದೀಪವು ಬರುವವಳ ಕಣ್ಣಿಗೆ ಶೂಲವಾಗಲಿ, ಎದೆಗೆ ಬಾಣವಾಗಲಿ ಎಂದು ಹೇಳಿ ತವರು ಮನೆಗೆ ಹೋಗುತ್ತಾಳೆ. ದಿಬ್ಬಣ ಬಂದು ಸಿರಿಯು ಪಾಲಕಿಯಿಂದ ಇಳಿದಾಗ ದೀಪದ ಬೆಳಕು ಆಕೆಯ ಕಣ್ಣಿಗೆ ಸೂಜಿಯಂತೆ ಚುಚ್ಚುತ್ತದೆ. "ಸತ್ಯದ ಸಿರಿ ನಾನು ಹೌದಾದರೆ–ಆ ದೀಪವನ್ನು ನಾನು ನಂದಿಸಬಲ್ಲೆ. ಆದರೆ, ಆಗ ಆಕೆಯ ಎರಡು ಕಣ್ಣು ಕುರುಡಾದೀತು" ಎಂದು ಹೇಳುತ್ತಾಳೆ. ಊರಿನ ಗೃಹಸ್ಥರು ಕೊಡ್ಸರ ಆಳ್ವನೊಂದಿಗೆ ಹೋಗಿ ಸೋಮ ಆಳ್ವೆದಿಯನ್ನು ಸಮಾಧಾನ ಪಡಿಸಿ ಕರೆತರುತ್ತಾರೆ. ಆಕೆ ಸಿರಿಯನ್ನು ಕೈ ಹಿಡಿದು ಮನೆಗೆ ಹತ್ತಿಸಿಕೊಳ್ಳುತ್ತಾಳೆ. ಮಾರನೆ ದಿನ ಊಟ ಮುಗಿಸಿ ದಿಬ್ಬಣದೊಂದಿಗೆ ವಧುವರರು ಬೋಳದ ಅರಮನೆಗೆ ಹಿಂತಿರುಗುತ್ತಾರೆ.

ಆಧಾರ : 1. ಶೀನಪ್ಪ ಹೆಗ್ಗಡೆ ಸಮಗ್ರ ಸಾಹಿತ್ಯ
2. ಅಮೃತ ಸೋಮೇಶ್ವರರ ಅಭಿನಂದನ ಗ್ರಂಥ "ಸಿರಿ"
3. ತುಳು ಯಕ್ಷಗಾನಪ್ರಸಂಗ "ತುಳುನಾಡ ಸಿರಿ"

ಎನ್. ಎಸ್. ದೇವಿಪ್ರಸಾದ್, ಸಂಪಾಜೆ

ನಿಮಗಿದು ತಿಳಿದಿರಲಿ

1. ಕನ್ನಡದ ಆದಿಕವಿ – ಪಂಪ
2. ಕನ್ನಡದ ಆದಿಕವಿಯ ಗ್ರಂಥಗಳು – ಆದಿಪುರಾಣ, ವಿಕ್ರಮಾರ್ಜುನ ವಿಜಯ
3. ಕನ್ನಡದ ಛಂದಸ್ಸಿನ ಗಾಯಿತ್ರಿ – ತ್ರಿಪದಿ
4. ಕನ್ನಡದ ಕಣ್ವ ಮಹರ್ಷಿ – ಬಿ. ಎಂ. ಶ್ರೀಕಂಠಯ್ಯ
5. ಕನ್ನಡದ ಮೊದಲ ಗದ್ಯಗ್ರಂಥ – ವಡ್ಡಾರಾಧನೆ

ಚಿಲ್ಲನ ಮನು, ಕುಯ್ಯಂಗೇರಿ

ವಿಜೃಂಭಿಸಿದ ಗೌಡ ಜನಾಂಗದ ಸಂತೋಷ ಕೂಟ - 1998

ಕೊಡಗು ಗೌಡಸಮಾಜ, ಕುಶಾಲನಗರದಲ್ಲಿ ಸಂತೋಷ ಕೂಟವು ಅರೆಭಾಷಿಕ ಗೌಡ ಹಾಗೂ ಒಕ್ಕಲಿಗೌಡರ ಸಂಯುಕ್ತ ಆಶ್ರಯದಲ್ಲಿ ಜನವರಿ 24, 25ರಂದು ನಡೆಯಿತು. 24ರಂದು ಆಟೋಟಗಳ ಸ್ಪರ್ಧೆಗಳಾದರೆ, 25ರಂದು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇದೊಂದು ಬರೀ ಸಂತೋಷ ಕೂಟ ಆಗಿರದೆ, ಗೌಡ ಜನರ ಪಾಲಿಗೆ ಮಹಾಯುದ್ಧದಲ್ಲಿ ಜಯಗಳಿಸಿದಷ್ಟು ಸಂತೋಷದ ಕೂಟವೇ ಆಗಿತ್ತು. ಇದನ್ನೆಲ್ಲಾ ಗಮನಿಸಿದರೆ ಇಂದು ಗೌಡಜನಾಂಗ ಬಹಳ ಮುಂದುವರೆದಿದ್ದಾರೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಕಾನನದ ಸುಮದಂತೆ ಇದ್ದ ಗೌಡರು ಇಂದು ತಮ್ಮ ಸೌರಭವನ್ನು ಹೊರಚೆಲ್ಲಿ ಮುಂದೆ ಬರುವುದನ್ನು ನೋಡಿದರೆ ನಿಜವಾಗಿಯೂ ಬೇರೆ ಜನಾಂಗಕ್ಕಿಂತ ನಾವೇನು ಕಡಿಮೆ ಎನ್ನುವಷ್ಟರ ಮಟ್ಟಿಗೆ ಛಲದ ಭಾವನೆ ಮೂಡಿದಂತಿದೆ. ಗೌಡ ಜನಾಂಗಕ್ಕೆ ನಿಜವಾಗಿಯೂ ಇದೊಂದು ಹೆಮ್ಮೆಯ ವಿಷಯವೆಂದು ಹೇಳಬಹುದು.

ಸಾಂಸ್ಕೃತಿಕ ಕಾರ್ಯಕ್ರಮವು ಮೊದಲು ಶ್ರೀಮತಿ ಅಳಿಯಂಕನ ಸೀತಾರತ್ನರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶೋಭಾನೆ, ಹಾಡುಗಾರಿಕೆ, ನೃತ್ಯ, ಕೋಲಾಟ, ಭಾವಗೀತೆ, ಜನಪದ ಗೀತೆ ಮುಂತಾದ ಕಾರ್ಯಕ್ರಮಗಳು ನಡೆದು ವೀಕ್ಷಕರ ಗಮನ ಸೆಳೆದವು. ಇದರಲ್ಲಿ ಮರದಾಳು ತಾರಾ ಮತ್ತು ಸಂಗಡಿಗರು ಗೇಂಟೆ ಸೀರೆ ಉಟ್ಟು, ಕೋಲು "ಕುಣಿದಾವೆ" ಎಂಬ ಜಾನಪದ ಗೀತೆಗೆ ರಾಗ, ತಾಳ, ಭಾವಕ್ಕೆ ತಕ್ಕಂತೆ ಕೋಲು ಹೊಡೆದು ಕುಣಿದದ್ದು ಜನರ ಮನ ರಂಜಿಸಿತು. ಹಾಗೆಯೇ ಮರದಾಳು ದೇವಕ್ಕಿ ಸಂಗಡಿಗರಿಂದ ನೃತ್ಯ, ಮರದಾಳು ಬಿಂದಿಯಾ ಚಂದ್ರರವರಿಂದ ನೃತ್ಯ ತುಂಬಾ ಉತ್ತಮವಾಗಿ ಮೂಡಿ ಬಂದವು, ಕೆಮ್ಮಾರನ ಮಾನಸರವರ ನೃತ್ಯವೂ ಕೂಡಾ ಬಹಳ ಚೆನ್ನಾಗಿತ್ತು.

ಇದಾದ ನಂತರ ಸಭೆ ಪ್ರಾರಂಭವಾಯಿತು. ಮೊದಲಿಗೆ ಗೌಡ ಜನಾಂಗದ ಸಂತೋಷ ಕೂಟದ ಅಧ್ಯಕ್ಷರಾದ ನೇಮಿರಾಜ್‌ರವರು ಸ್ವಾಗತಭಾಷಣ ಮಾಡಿದರು. ನಿವೃತ್ತ ಪೋಲಿಸ್ ಗೌಡ ಸಮಾಜದ ಅಧಿಕಾರಿ ಹಾಗೂ ಹಾಲಿ ಅಧ್ಯಕ್ಷರಾದ ಶ್ರೀ ಕೊಂಪುಳಿರ ಸೋಮಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಾರ್ವಜನಿಕ ಆರೋಗ್ಯ ಸೇವಾಕೇಂದ್ರದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಈಗ ಕುಶಾಲನಗರ ಗೌಡ ಸಮಾಜದ ತಾಂತ್ರಿಕ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಪಳಂಗೋಟು ಅಮ್ಮಣ್ಣನವರು ಮುಖ್ಯ ಅತಿಥಿಗಳಾಗಿದ್ದರು. ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆಯಾದ ಶ್ರೀಮತಿ ಅಮೆ ಕಮಲಾ ಗಣಪತಿಯವರನ್ನು ಈ ಸಂದರ್ಭದಲ್ಲಿ ಸಂತೋಷ ಕೂಟದ ಪರವಾಗಿ ಕುದುಪಜೆ ಶಾಂತಿ ಬೋಜಪ್ಪನವರುಶಾಲು ಹೊದಿಸಿ, ಫಲತಾಂಬೂಲ ನೀಡಿ ಸನ್ಮಾನಿಸಿದರೆ, ಕುದುಕುಳಿ ಟಿ. ಸುಬ್ಬಯ್ಯನವರು ಕುಶಾಲನಗರ ಗೌಡ ಸಮಾಜದ ಸ್ಥಾಪಕ ಅಧ್ಯಕ್ಷರಾದ ಸೋಮಪ್ಪನವರಿಗೆ ಸಂತೋಷ ಕೂಟದ ಪರವಾಗಿ ಶಾಲುಹೊದಿಸಿ, ಫಲತಾಬೂಲ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಿರಗಜೆ ನಂಜುಂಡರವರು, ಗೌಡ ಜನಾಂಗದ ಪತ್ರಿಕೆಯಾದ "ಕೊಡಗು ಸಂಗಾತಿ"ಯ ಗೌ|| ಸಂಪಾದಕ ಪಟ್ಟಡ ಪ್ರಭಾಕರ ಹಾಗೂ "ಶಕ್ತಿ" ಪತ್ರಿಕೆಯ ಕುಶಾಲನಗರದ ವರದಿಗಾರರಾದ ಶ್ರೀ ಕುದುಪಜೆ ಬಸಪ್ಪನವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸ್ವಾಗತ ಭಾಷಣದಲ್ಲಿ ನೇಮಿರಾಜ್‌ರವರು ಮಾತನಾಡುತ್ತಾ, ನಮ್ಮಲ್ಲಿ ಬೇಕಾದಷ್ಟು ಮಂದಿ ಒಳ್ಳೆಯ ಹುದ್ದೆಯಲ್ಲಿದ್ದಾರೆ. ಆದರೆ ಅಂತವರು ನಮ್ಮ ಜನಾಂಗದ ಬಡವರಿಗೆ ಸ್ಪಂದಿಸುವುದು ತೀರಾ ಕಡಿಮೆ. ಉದಾ : ಇಲ್ಲಿ ಸನ್ಮಾನಿತರಾಗಿ ಆಗಮಿಸಿದಂತ ಕಮಲಾ ಗಣಪತಿಯವರು ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆಯಾದರೂ ಅವರಿಂದ ನಮ್ಮ ಜನಾಂಗಕ್ಕೆ ಸಂದ ಸೇವೆ ಏನೇನೂ ಸಾಲದು. ಸಮಸ್ಯೆಗಳನ್ನು ಕೋರಿ ಬಂದವರ ಸಮಸ್ಯೆಗಳನ್ನು ನಿವಾರಿಸಿ ನಿಮ್ಮ ಕೈಲಾದುದನ್ನು ಮಾಡಿ ಎಂದು ಹೇಳಿದರು. ನಾವು ವಯೋವೃದ್ಧರಿಗಾಗಿ ಒಂದು ಅಭಯ ಆಶ್ರಮವನ್ನು ತೆರೆಯುವ ಉದ್ದೇಶವನ್ನು ಹಮ್ಮಿಕೊಂಡಿದ್ದೇವೆ. ಅದಕ್ಕೆ ಗೌಡ ಸಂಘ ಸಂಸ್ಥೆಗಳ ಸಹಕಾರ ಬೇಕು ಎಂದು ಕೋರಿದರು.

ಕೊಡಗನ ರಮೇಶ್ ನಿರೂಪಣೆ ಮಾಡುತ್ತ, ನಮ್ಮ ಗೌಡ ಜನಾಂಗದ ಮದುವೆಯ ಚಪ್ಪರ ಮತ್ತು ವೀಳ್ಯಶಾಸ್ತ್ರ ಕ್ರಮಗಳಿಗೆ ಸಾವಿರಾರು/ಲಕ್ಷಾಂತರ ರೂಪಾಯಿಗಳ ಖರ್ಚನ್ನು ನಿಲ್ಲಿಸಿ ಈ ಹಿಂದೆ ಇದ್ದಂತಹ ರೀತಿಯಲ್ಲಿಯೇ ಮುಂದುವರಿಯಬೇಕೆಂದು ವಿನಂತಿಸಿದರು.

ಮುಖ್ಯ ಅತಿಥಿಗಳು ಭಾಷಣ ಮಾಡುತ್ತಾ, ನಮ್ಮನ್ನು ಹೀಗೆ ಸನ್ಮಾನಿಸುವುದಕ್ಕಿಂತ ಶಾಲಾ-ಕಾಲೇಜುಗಳಲ್ಲಿ ಓದಿ, ಹೆಚ್ಚು ಅಂಕಗಳನ್ನು ಪಡೆದು ರ್‍ಯಾಂಕ್ ಗಳಿಸಿದಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಿದರೆ, ಅವರು ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಓದಿನ ಕಡೆಗೆ ನೀಡಿ ಮುಂದುವರಿಯಲು ಪ್ರಯತ್ನಿಸುತ್ತಾರೆ ಎಂದು ಹಿತ ನುಡಿದರು.

ಅಮೆ ಕಮಲಾ ಗಣಪತಿಯವರು ಮಾತನಾಡುತ್ತಾ, ನನ್ನಿಂದ ನಮ್ಮ ಜನಾಂಗಕ್ಕೆ ಎಷ್ಟು ಸಹಾಯ ಮಾಡಲು ಸಾಧ್ಯವೋ ಅದನ್ನು ಮಾಡೇತೀರುತ್ತೇನೆ ಎಂಬ ಭರವಸೆಯನ್ನಿತ್ತರು. ಅಂದು ನಡೆದ ಆ ಸಂತೋಷ ಕೂಟವು ಗೌಡ

○ ವರದಿ : **ಮುಞ್ಞಂಡ್ರ ಕೆ. ರಮೇಶ್**, ಮೈಸೂರು

ಬಾಂಧವರಿಗೆ ಹಬ್ಬದ ವಾತಾವರಣವನ್ನು ಮೂಡಿಸಿದೆ ಎಂದರು. ಆದರೆ ಇಲ್ಲಿ ನೆರೆದಿದ್ದವರಲ್ಲಿ ಗಂಡಸರಿಗಿಂತ ಹೆಂಗಸರು ಮಕ್ಕಳದೇ ಮೇಲುಗೈ ಎಂದು ಹಾಸ್ಯ ಛಟಾಕಿಯನ್ನೆಸೆದರು. ಕೆಲ ವರ್ಷದ ಹಿಂದೆ ಇಂತಹ ಅಭಿವೃದ್ಧಿ ಸಂಘವನ್ನು ಹಮ್ಮಿಕೊಂಡಿತ್ತು. ಕಾರಣಾಂತರದಿಂದ ಅದು ನಿಂತು ಹೋಯಿತು. ಆ ರೀತಿ ಈ ಸಂಘವು ಆಗದೆ, ಇದೇ ರೀತಿಯ ಆಚರಣೆ ಮುಂದೆಯೂ ಮೂಡಿ ಬರಲಿ ಎಂದು ಆಜ್ಞಾಪನಾ ಕರೆಯನ್ನಿತ್ತರು.

ಕುದುಕುಳಿ ಸುಬ್ಬಯ್ಯನವರು ಅರೆಭಾಷೆ ಗೌಡರು, ಒಕ್ಕಲಿಗ ಗೌಡರು ನಾವೆಲ್ಲಾ ಒಂದೇ, ಮೊದಲು ಅರೆಭಾಷೆಗೌಡರುಗಳು ಹಳೆಗನ್ನಡವನ್ನು ಮಾತಾಡುವ ಗೌಡರೆಂದು, ಈಗ ಅದೇ ಕನ್ನಡ ಅರೆಭಾಷೆಯಾಗಿ ಮೂಡಿಬಂದುದೆಂದು ಹೇಳಿದರು. ಎಲ್ಲಾ ಕಡೆ ಮಹಿಳಾ ಸಂಘಟನೆಗಳು ಉದ್ಘಾಟನೆಯಾಗುತ್ತಿದೆ. ಇಲ್ಲೇಕೆ ಮಾಡಬಾರದೆಂದು ಸಲಹೆಯಿತ್ತರು. ಅದೇ ರೀತಿ ಮಧ್ಯಾಹ್ನದ ಭೋಜನದ ನಂತರ ಮಹಿಳಾ ಸಂಘಟನೆಯೂ ಉದ್ಘಾಟನೆಯಾಯಿತು. ಬೇಟೆಗಾರನ ಒಂದು ಗುಂಡಿಗೆ ಎರಡು ಪಕ್ಷಿಗಳಂತೆ ಲೇಖಕನ ಒಂದು ಲೇಖನಿಗೆ ಎರಡು ಸಂಘಟನೆಯ ವರದಿಗಳು ದೊರೆತವು.

"ಕೊಡಗು ಸಂಗಾತಿ"ಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರವರು ಮಾತನಾಡಿ ಜನಾಂಗದವರಲ್ಲಿ ಎಂದಿಗೂ ಸ್ವಾರ್ಥತನ, ಕೀಳರಿಮೆ, ದ್ವೇಷ, ಮತ್ಸರ ಹೋಗದಿದ್ದಲ್ಲಿ ಅಲ್ಲಿಯವರೆಗೆ ನಮ್ಮ ಜನಾಂಗ ಮುಂದೆ ಬರಲು ಸಾಧ್ಯವಿಲ್ಲವೆಂದರು. ನಿಸ್ವಾರ್ಥ ತ್ಯಾಗ ಮನೋಭಾವದಿಂದ ಸೇವೆ ಮಾಡಿದರೆ ಮಾತ್ರ ಇದು ಸಾಧ್ಯವೆಂದು ನುಡಿದರು. ಹಾಗೆಯೇ ಪತ್ರಿಕೆಯ ಬೆಳವಣಿಗೆಯ ಬಗ್ಗೆ, ಆಗು ಹೋಗುಗಳ ಬಗ್ಗೆ ವಿವರಣೆ ನೀಡಿದರು. ಪತ್ರಿಕೆ ಬೆಳವಣಿಗೆಗೆ ಜನಾಂಗದ ಸಹಕಾರ ಏನೇನೂ ಸಾಲದೆಂದೂ, ಪತ್ರಿಕೆಯನ್ನು ಕೊಂಡು ಓದುವುದಕ್ಕಿಂತ ಕದ್ದು ಓದುವವರೇ ಜಾಸ್ತಿ ಎಂದು ಖೇದದಿಂದ ನುಡಿದರು.

ಇನ್ನೇನು ಕಾರ್ಯಕ್ರಮಗಳು ಮುಗಿಯುತ್ತಾ ಬಂತು ಎಂದಾಗ ಮಾಪೋಜಿ ಗಣೇಶ್‌ರವರು ತಮ್ಮ ಸಿಂಹಘರ್ಜನೆಯಲ್ಲಿ ಮಾತನಾಡುತ್ತಾ, ಅರೆಭಾಷೆ ಗೌಡರಾಗಲೀ, ಒಕ್ಕಲಿಗ ಗೌಡರಾಗಲೀ ನಾವೆಲ್ಲಾ ಗೌಡರೇ. ನಮ್ಮನ್ನು ನಾವೇ ಕಡಿಮೆ ಎಂದು ತಿಳಿಯದೆ ನಾನೊಬ್ಬ ಗೌಡನೆಂದು ಎದೆ ತಟ್ಟಿ ಹೇಳು, ಎದೆತಟ್ಟಿ ನಿಲ್ಲು. ಗೌಡ ಗೋವಾದಲ್ಲಿರಲಿ, ಪಶ್ಚಿಮ ಬಂಗಾಳದಲ್ಲೇ ಇರಲಿ, ಜಮ್ಮು ಕಾಶ್ಮೀರದಲ್ಲಿರಲಿ, ಗೌಡ ಗೌಡನೇ. ಕರ್ನಾಟಕದಲ್ಲಿ ಗೌಡ, ತಮಿಳುನಾಡಿನಲ್ಲಿ ಗೌಂಡರ್, ಆಂಧ್ರದಲ್ಲಿ ರೆಡ್ಡಿ ಇವರೆಲ್ಲ ಗೌಡರೆ ಎಂದು ಧೀರ ಯೋಧನಂತೆ ಎದೆ ಮುಂದೆ ಮಾಡಿ ವೀರಾವೇಶದಿಂದ ಮಾತನಾಡಿದರು. ಅಂತೆಯೇ ಇವರೊಬ್ಬರು ಮಾಜಿ ಯೋಧರು ಸಹ ಹೌದು. ಇವರ ಭಾಷಣವನ್ನು ವೀಕ್ಷಕರು ಬಹಳ ಆಸಕ್ತಿಯಿಂದ ಕೇಳುತ್ತಿದ್ದರು. ಗುಡ್ಡೇರ ಅಪ್ಪಯ್ಯಗೌಡರ ಪ್ರತಿಮೆಯನ್ನು ಮಡಿಕೇರಿಯಲ್ಲಿ ಸ್ಥಾಪಿಸಬೇಕೆಂದು, ನಾವೆಲ್ಲಾ ಕ್ಷತ್ರಿಯರೆಂದು ನುಡಿದರು. ನಿವೃತ್ತ ಶಿಕ್ಷಕರಾದಂತಹ ಶಿರೆಗಜ್ಜೆ ನಂಜುಂಡರವರು ಮಾತನಾಡಿ "ಊರಿಗೊಬ್ಬ ಗೌಡ, ದೇಶಕೊಬ್ಬ ದೊರೆ" ಇದು ಹಿಂದಿನಿಂದ ಬಂದದ್ದು. ಆದ್ದರಿಂದ ಗೌಡರು ಎಂದರೆ ದೊರೆ/ಮುಖ್ಯಸ್ಥ ಎನ್ನುವ ಅರ್ಥವನ್ನು ಸೂಚಿಸುವಂತದ್ದಾಗಿದೆ ಎಂದರು. ನಮ್ಮಲ್ಲಿ ಮಹಿಳೆಯರು ಕೇವಲ ಅಡುಗೆ ಮನೆಗೆ ಸೀಮಿತವಾಗಿರದೆ, ಹೊರ ಬಂದು ಗಂಡಸರಿಗಿಂತ ನಾವೇನು ಕಡಿಮೆ ಇಲ್ಲ ಎನ್ನುವ ರೀತಿ ಕಾರ್ಯ ಮಾಡಿ ತೋರಿಸಬೇಕು. ಇಂದು ನಾವು ಮುಂದುವರಿಯದಿದ್ದರೆ ಖಂಡಿತವಾಗಿ ಮೂಲೆ ಗುಂಪಾಗುತ್ತೇವೆಂದು ನೊಂದು ನುಡಿದರು.

ಇದಾದ ನಂತರ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಿದರು. ಕೊಡಗನ ರಮೇಶ್‌ರವರು ಉತ್ತಮವಾಗಿ ನಿರೂಪಣೆಗೈದರು. ಕೊನೆಗೆ ವಂದನಾರ್ಪಣೆಯನ್ನು ಅವರು ಮಾಡಿ, ಈ ಕಾರ್ಯಕ್ರಮಕ್ಕೆ ತೆರೆ ಎಳೆದರು.

ಗೌಡ ಮಹಿಳಾ ಒಕ್ಕೂಟ ಉದ್ಘಾಟನೆ

ತಾ|| 25–1–98ನೇ ಭಾನುವಾರ ಸಂಜೆ 4–15ಕ್ಕೆ ಕುಶಾಲನಗರದ ಗೌಡ ಸಮಾಜದಲ್ಲಿ ಅರೆಭಾಷಿಕ ಗೌಡ ಮತ್ತು ಒಕ್ಕಲಿಗೌಡ ಮಹಿಳೆಯರು ಸಂಯುಕ್ತವಾಗಿ ಮಹಿಳಾ ಸಂಘಟನೆಯನ್ನು ಉದ್ಘಾಟಿಸಿದರು. ಈ ಒಕ್ಕೂಟದ ಅಧ್ಯಕ್ಷತೆಯನ್ನು ಶ್ರೀಮತಿ ಸೂಧನ ರತ್ನಾವತಿ ಪೂಣಚ್ಚರವರು ವಹಿಸಿದ್ದರು. "ಕೊಡಗು ಸಂಗಾತಿ" ಪತ್ರಿಕೆಯ ಗೌ|| ಸಂಪಾದಕರಾದ ಶ್ರೀ ಪಟ್ಟಡ ಪ್ರಭಾಕರರವರು ಮಾತನಾಡಿ ಸಂಘದ ಉದ್ದೇಶದ ಬಗ್ಗೆ ತಕ್ಕ ಮಾಹಿತಿ ಹಾಗೂ ಸಲಹೆ ನೀಡಿದರು. ಕುದುಕುಳಿ ಸುಬ್ಬಯ್ಯನವರು ಮತ್ತು ಕೊಡಗನ ರಮೇಶ್‌ರವರು ಇಲ್ಲಿ ಉಪಸ್ಥಿತರಿದ್ದು ತಕ್ಕ ಸಲಹೆ ನೀಡಿದರು. ಅನಂತರ ಈ ಕೆಳಗಿನ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರು : ಸೂಧನ ರತ್ನಾವತಿ ಪೂಣಚ್ಚ, ಉಪಾಧ್ಯಕ್ಷೆ : ಕುದುಪಜೆ ಶಾಂತಿ ಬೋಜಪ್ಪ, ಕಾರ್ಯದರ್ಶಿ : ಕೊಡಗನ ಇಂದಿರಾ ಲಕ್ಷ್ಮಣ, ಖಜಾಂಚಿ : ಅಮೆ ಕಮಲಾ ಗಣಪತಿ ಸದಸ್ಯರುಗಳಾಗಿ : ಚೇಯಂಡಿರ ಶಾಂತಿ, ಗುಡ್ಡನ ಮೀನಾಕ್ಷಿ ಆನಂದ, ಬೈತಡ್ಕ ತ್ರಿಲೋಚನ ಈರಪ್ಪ, ಕುಲ್ಲ ಚೆಟ್ಟೀರ ಹೇಮಾವತಿ ಪೂವಯ್ಯ, ಪೆರ್ಬಾಯಿ ಹೊನ್ನಮ್ಮ ಚೆಣ್ಣಪ್ಪ, ಕುದುಕುಳಿ ಸುನೀತ ಲೋಕೇಶ್, ಉದಿಯನ ಪ್ರೇಮ ಇವರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

ವರದಿ : ಪ.ಮು.ಪ್ರ.

ಟೀಕೆ-ಟಿಪ್ಪಣಿ

ತಾ॥ 4-1-98ನೇ ಭಾನುವಾರ ಮಡಿಕೇರಿಯಲ್ಲಿ ನಡೆದ ಗೌಡ ಸಾಂಸ್ಕೃತಿಕ ಕೂಟ ಚೆನ್ನಾಗಿ ನಡೆಯಿತು. ನನ್ನ ಹಾಗೂ ಕೆಲವರ ಅನಿಸಿಕೆ ಪ್ರಕಾರ ಇದು ಗೌಡ ಸಾಂಸ್ಕೃತಿಕ ಕಾರ್ಯಕ್ರಮ ಆಗಿರದೆ ಬರೆ ಒಂದು ಗೌಡ ಮನರಂಜನಾ ಕೂಟ ಆಗಿತ್ತಷ್ಟೆ. ಕೂಟದ ಆರಂಭದಲ್ಲಿ ಉದ್ಘಾಟನೆ ಮಾಡಿದ ಮಹಾನ್ ವ್ಯಕ್ತಿ ಕಾಲಿನಿಂದ ಚಪ್ಪಲಿ [ಶೂ] ಕಳಚದೆ ಜ್ಯೋತಿ ಬೆಳಗಿಸಿದ್ದು, ಗೌಡ ಜನಾಂಗದ ಕುಲ ದೇವತೆಯಾದ ಶ್ರೀ ವೆಂಕಟರಮಣ ದೇವರಿಗೂ ಹಾಗೂ ಗೌಡ ಸಂಸ್ಕೃತಿಗೂ ಅವಮಾನ ಮಾಡಿದಂತೆ ಆಗಿದೆ ಅಲ್ಲವೇ ? ಇದೂ ಒಂದು ಸಂಸ್ಕೃತಿಯೇ ?

ಗೌಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪರಭಾಷೆಯ ನೃತ್ಯಗಳು, ಹಾಡುಗಳು, ಡಿಸ್ಕೋ ನೃತ್ಯ, ಬ್ರೇಕ್ ನೃತ್ಯ ಇತ್ಯಾದಿ ಬರಬಹುದೇ ? ಇದೂ ಕೂಡಾ ಗೌಡ ಸಂಸ್ಕೃತಿಯಲ್ಲಿ ಇದೆಯೆ? ಗೌಡ ಸಂಸ್ಕೃತಿಯ ಪ್ರಕಾರ ಮಹಿಳೆಯರು ಗೌಡ ಪದ್ಧತಿಯ ಪ್ರಕಾರ ಸೀರೆ ಧರಿಸಬೇಕಿತ್ತು, ಆದರೆ ಕೆಲವರು ಬಡವರು ಹಾಗೂ ಮಧ್ಯವರ್ತಿಯ ಮಹಿಳೆಯರು ಮಾತ್ರ ಪದ್ಧತಿ ಪ್ರಕಾರ ಸೀರೆ ಧರಿಸಿದ್ದರು. ಶ್ರೀಮಂತರಿಗೆ ಗೌಡ ಸೀರೆ ಉಡಲು ನಾಚಿಕೆ ಕಾಣುತ್ತೆ. ಆದರೂ ಗೌಡ ಸಾಂಸ್ಕೃತಿಕ ಅಕಾಡೆಮಿಯ ಮಹಿಳಾ ಕಮಿಟಿಯವರಾದರೂ ಗೌಡ ಸೀರೆ ಧರಿಸಿದ್ದರೆ ಇತರರಿಗೂ ಮನವರಿಕೆಯಾಗುತ್ತಿತ್ತೋ ಏನೋ ಎಂಬುದಾಗಿ ಕೆಲವರ ಅಭಿಪ್ರಾಯ.

ಗೌಡ ಕೂಟಕ್ಕೆ ಬಡವರು, ಶ್ರೀಮಂತರು ಎಲ್ಲರು ಕೈಲಾದ ಧನ ಸಹಾಯ ಮಾಡಿರುತ್ತಾರೆ. ಆದರೆ ನೀವು ಶ್ರೀಮಂತರು ಮಾಡಿದ ಧನ ಸಹಾಯವನ್ನು ಮಾತ್ರ ಸಭೆಯಲ್ಲಿ ಓದಿ ಹೇಳಿ ಬಡವರ ಮನಸ್ಸಿಗೆ ನೋವು ಉಂಟು ಮಾಡಿದ್ದೀರಿ. ಇದು ಸರಿಯಲ್ಲ. ನಾವು ಕೊಟ್ಟಂತ ಹಣಕ್ಕೆ ಬೆಲೆ ಇಲ್ಲವೆ, ಇದು ಶ್ರೀಮಂತರ ಕೂಟವೆ, ಎಂಬುದಾಗಿ ಅಲ್ಲಲ್ಲಿ ಮಾತು ಕೇಳಿ ಬರುತ್ತಿತ್ತು. ಧನ ಸಹಾಯ ಮಾಡಿದವರ ಹೆಸರನ್ನು ಸಭೆಯಲ್ಲಿ ಓದಿ ಹೇಳುವುದಕ್ಕಿಂತ ಬದಲಾಗಿ ಒಟ್ಟು ಇಂತಿಷ್ಟು ಹಣ ಸಂಗ್ರಹವಾಗಿದೆ ಎಂಬುದಾಗಿ ಹೇಳಿದ್ದರೆ ಸಾಕಿತ್ತು ಎಂದು ನನ್ನ ಅನಿಸಿಕೆ.

ಸಭೆ ಸಮಾರಂಭಗಳಲ್ಲಿ ಲೋಪ ದೋಷಗಳು ಆಗುವುದು ಸಹಜ, ಆದರೆ ಅವನ್ನು ಇನ್ನು ಮುಂದೆ ಸರಿಪಡಿಸಿಕೊಂಡು ಮುಂದಕ್ಕಾದರು ಗೌಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಗೌಡ ಜನಾಂಗದ ಮುಖ್ಯ ಕರ್ತವ್ಯವಾಗಿದೆ.

ಪಿ. ಆರ್. ಪ್ರಕಾಶ್, ಮರಗೋಡು

SOME...!

ಗಂಡ-ಹೆಂಡತಿ ಹಾಯಾಗಿದ್ದರೇನೆ
ಅದೊಂದು ಸಂಸಾರ ! ಹಾಗಿರಲು,
ಅವರಲ್ಲಿ ಇರಬೇಕು
ಪ್ರೀತಿಯ **SOME** ಸಾರ !!

ಹನಿ ನೀರಾಗಲು
ಆಗಬೇಕು
ಆಕ್ಸಿ-ಹೈಡ್ರೋಜನ್‌ಗಳ ಸಂಯೋಗ
ಹಾಗೆಯೇ ನೀ ನನ್ನವಳಾಗಲೂ
ಬೇಕು ನನಗೆ
SOME ಯೋಗ !!
ಪ್ರಿಯೆ ನೀ ಸನಿಹವಿದ್ದಾಗ
ಮನದಲ್ಲಿ ಸದಾ ಸಂವೇದನೆ,
ನೀ ಅಗಲಿದಾಗ ನನ್ನ ಮನದಲ್ಲಿ
ವಿರಹದ **SOME** ವೇದನೆ !!

ಎಡಿಕೇರಿ ಸುಗುಣ ಶೇಷಪ್ಪ, ಬಲ್ಲಮಾವಟಿ

ನುಡಿಮುತ್ತು

ಗೌಡರ ನಡೆ ಚೆಂದ,
ಗೌಡರ ನುಡಿ ಚೆಂದ
ಗೌಡರ ಅರೆಭಾಷೆ ಬಲು ಚೆಂದ
ಗೌಡ ಸಂಗಾತಿ ಬಲು ಚೆಂದ
ಚೆಂದ ಚೆಂದದ ಕೊಡಗು ಸಂಗಾತಿ
ಇನ್ನೂ ಚೆಂದ ಚೆಂದ ಚೆಂದಾ......

ಪುಟಾಣಿ ಹೊಸೊಕ್ಲು ಕೀರ್ತನ್, ಸುಳ್ಯ

ಚು ಟು ಕ

ಇಪ್ಪತರ ಹರೆಯದ ಈ ನವ್ಯ ತರುಣಿ
ಬೀದಿಯಲಿ ನಡೆವಾಗ ಯೌವನದ ಹರಿಣಿ
ಇವಳಿಗೆ ಊರ ಹುಲಿಗಳ ಕಾಟ
ಜೋಕೆ ! ತಪ್ಪಿದರೆ ಬೇಟೆಯಾಗುವುದು ದಿಟ

ಬೈತಡ್ಕ ಕೆ. ಹೇಮ

ನಿಮ್ಮ ಪತ್ರಗಳು

ಚೇತನದ ಚಿಲುಮೆ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಕೊಡಗಿನಲ್ಲಿ ವೈಶಿಷ್ಟ್ಯ ಪೂರ್ಣ ನೆಲೆಗಟ್ಟಿನ ಮೇಲೆ ಜನಾಂಗಿಯ ಬದಲಾವಣೆ ಕಂಡು ಬರುತ್ತಿರುವುದು ಒಂದು ರೀತಿಯಲ್ಲಿ ಹೇಳಬೇಕಾದರೆ, ಹಲ ವಾರು ವರ್ಷಗಳು ಸಂದನಂತರ ಒಂದು ರೀತಿಯ ಚೇತನದ ಚಿಲುಮೆ ಚಿಮ್ಮಿ ಬೆಳಕನ್ನು ಹರಡಿದಂತಾಗಿದೆ. ಇದು ಒಂದು ರೀತಿಯ ಶುಭ ಸೂಚನೆ ಎಂದು ಹೇಳಬಹುದು.

ಕೊಡಗು ಅರೆಭಾಷೆ ಗೌಡರ ಸಂದು ಹೋದ ಚರಿತ್ರೆಯ ಹಿನ್ನೆಲೆ ನೋಡಿದಾಗ ಅವರದೇ ಒಂದು ವಿಶೇಷ ನೆಲೆಗಟ್ಟು, ಸಂಸ್ಕೃತಿ, ಸಂಪ್ರದಾಯ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಭದ್ರಬುನಾದಿ ಇದೆ ಎಂದು ಚರಿತ್ರಾಕಾರರಿಂದ ವಿಚಾರವಂತರಿಂದ ಹೊರಹೊಮ್ಮುತ್ತಿರುವ ಪತ್ರಿಕೆಯ ಮುಖಾಂತರ ತಿಳಿದು ಬರುತ್ತಿದೆ.

ಇಲ್ಲಿಯ ತನಕ ಸುಪ್ತವಾಗಿದ್ದ ಚೇತನಗಳು ಒಮ್ಮೆಲೆ ದಾಪು ಗಾಲು ಹಾಕಿ, ವಿಶಾಲ ಮನೋಭಾವದಿಂದ ತಮ್ಮ ಹಿರಿಮೆಯ ಕಡೆ ಪತಾಕೆ ಹಾರಿಸುತ್ತಿರುವುದು ಸಂತೋಷದ ವಿಚಾರ. ನಮ್ಮಲ್ಲಿರುವ ಅಥವ್ಯವಾಗಿರುವ ಚೇತನನನ್ನು ಚೈತನ್ಯ ತುಂಬಿ ಅತ್ಮಸ್ಥೈರ್ಯದಿಂದ ಮುನ್ನುಗ್ಗುತ್ತಾ ನಮ್ಮ ಅಸ್ಥಿತ್ವವನ್ನು ಮನಗಾಣುವಂತೆ ಮಾಡಲು ನಾವೆಲ್ಲ ತ್ಯಾಗ ಮನೋಭಾವ ದಿಂದ ಮೂಲ ಉದ್ದೇಶಗಳನ್ನು ತಿಳಿಯ ಪಡಿಸುತ್ತಾ ಶಿಸ್ತಿನಿಂದ ನಮ್ಮ ಪಾಲಿನ ಕರ್ತವ್ಯವನ್ನು ನಮ್ಮ ಸಮಾಜಕ್ಕೆ ನೀಡುವುದು ನಮ್ಮ ಆದ್ಯ ಕರ್ತವ್ಯ ಆಗಬೇಕಿದೆ.

ಈ ಬಗ್ಗೆ ಕೊಡಗಿನ ನಮ್ಮ ಯುವ ಜನತೆ ವಿಚಾರ ವಂತ, ಹಿರಿಯ ಮುತ್ಸದ್ಧಿಗಳು, ಬರಹಗಾರರು, ರಾಜಕೀಯ, ಧಾರ್ಮಿಕ ಹಿನ್ನೆಲೆ ಇರತಕ್ಕ ವಿದ್ಯಾವಂತ ಬುದ್ಧಿ ಜೀವಿಗಳು ಒಂದುಗೂಡಿ ಗ್ರಾಮ, ಗ್ರಾಮಗಳಲ್ಲಿ ಅಸಂಘಟಿತರಾದವರನ್ನು ಸಂಘಟಿಸಿ ನಮ್ಮ ಏಳಿಗೆಗೆ ದಾರಿದೀಪನೀಡುವಂತಾಗಬೇಕು ಇಂದಿನ ದಿನಗಳಲ್ಲಿ ಈ ಸಂಘಟನೆಯ ಅವಶ್ಯಕತೆ ಇದೆ ಎಂದು ನನ್ನ ಭಾವನೆ. ನಮ್ಮದೇ ಆದ ಹಬ್ಬ ಹರಿದಿನಗಳು, ಮದುವೆ ಮುಂಜಿ ಸಾಮಾಜಿಕ, ಸಾಂಸ್ಕೃತಿಕ, ಕ್ರೀಡೆ, ಸಂಪ್ರದಾಯಗಳನ್ನು ಬೆಳೆಸಿ ಪೋಷಿಸುವ ಅವಶ್ಯಕತೆ ತುಂಬಾ ಇದೆ ಎಂದು ನನ್ನ ಅನಿಸಿಕೆ. ಈ ಬಗ್ಗೆ ವಿಚಾರವಂತರು ಗಹನವಾದ ವಿಚಾರಗಳನ್ನು ಚರ್ಚಿಸಿ ಕಾರ್ಯ ಪ್ರವರ್ತರಾಗಬೇಕೆಂದು ನನ್ನ ಆಶಾಭಾವನೆ ಹಾಗೂ ಒಂದು ಸಲಹೆ.

ಉದಾಹರಣೆಗೆ ಇತ್ತೀಚೆಗೆ ಕುಶಾಲನಗರದಲ್ಲಿ ಒಂದು ಗೌಡ ಯುವಕ ಸಂಘ, ಸಂಘಟನೆ ಆಗುವುದೆಂದು ಪತ್ರಿಕೆಯಲ್ಲಿ ಬಿತ್ತರಗೊಂಡಿದ್ದು ತುಂಬಾ ಸಂತೋಷದ ವಿಚಾರವಾಗಿದೆ. ಇಂತಹ ಸಂಘಟನೆಗೆ ನುರಿತ, ಹಿರಿಯ ವಿದ್ಯಾವಂತರ, ತಿಳಿದ ವರ ಮಾರ್ಗದರ್ಶನದ ಅವಶ್ಯಕತೆ ಇದೆ. ಸಲಹೆಗಾರರ ಸಲಹೆ ಸೂಚನೆ ಬೇಕಾಗಿದೆ. ಈ ಸಂಘಟನೆಗಳು ಸೇವಾ ಮನೋ ಭಾವದಿಂದ ಕೂಡಿದ್ದು, ತಮ್ಮ ಜನಾಂಗದ ಅಸ್ಥಿತ್ವವನ್ನು ಕಾಪಾಡುವ, ಅದಕ್ಕೆ ಸಮಂಜಸವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯ ಪ್ರವರ್ತರಾಗಬೇಕಾಗಿದೆ. ಇವೆಲ್ಲ ಕೆಲವು ನನ್ನ ಅನಿಸಿಕೆಯನ್ನು ನಿಮ್ಮ ಮುಂದಿಟ್ಟಿದ್ದೇನೆ. ಇವರ ಬಗ್ಗೆ ನಿಮ್ಮ ಅನಿಸಿಕೆ ಬಗ್ಗೆ ಈ ಲೇಖನದ ನಿಮ್ಮ ಅಭಿಪ್ರಾಯಗಳೊಂದಿಗೆ ನಮ್ಮ ಗೌಡ ಜನಾಂಗಕ್ಕೆ ಸೂಕ್ತ ಮಾರ್ಗದರ್ಶನ "ಕೊಡಗು ಸಂಗಾತಿ" ನೀಡುತ್ತದೆಂದು ಬಯಸಿ ಧನ್ಯವಾದಗಳೊಂದಿಗೆ ಮುಕ್ತಾಯವಾಗುತ್ತದೆ.

ಚಂಡೀರ ಚಿಣ್ಣಪ್ಪ, ಕೋಕೇರಿ ಗ್ರಾಮ

ವಾರ ಪತ್ರಿಕೆಯಾಗಿ ಬರಲಿ

ಮಾನ್ಯರೆ,

ಮೂಲತಃ ಕೊಡಗಿನವರಾದ ನಮ್ಮ ಕಛೇರಿಯ ಸಹೋದ್ಯೋಗಿಯವರಿಗೆ ಬರುವಂತಹ ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯನ್ನು ಓದುವುದರಲ್ಲಿ ಅವರಿಗಿಂತಲೂ ಕೋಲಾರ ಜಿಲ್ಲೆಯವರಾದ ನನಗೆ ಬಹಳ ಕಾತರ. ನಿಮ್ಮ ಪತ್ರಿಕೆಯಲ್ಲಿ ಕೊಡಗು ಗೌಡ ಜನಾಂಗದ ವ್ಯಕ್ತಿ ಪರಿಚಯ, ಗೌಡ ಜನಾಂಗದ ಮದುವೆಯ ಪದ್ಧತಿ ಎಲ್ಲವೂ ಅಚ್ಚುಕಟ್ಟಾಗಿ ಮೂಡಿ ಬರುತ್ತಿದೆ. ಒಟ್ಟಿನಲ್ಲಿ ಪ್ರತಿಯೊಂದು ಪುಟವನ್ನು ಓದಿ ಸವಿದಾಗ ಆಗುವ ಸಂತೋಷ ನಿಜಕ್ಕೂ ಅವಿಸ್ಮರಣೀಯ. ನಿಮ್ಮ ಪ್ರಯತ್ನಕ್ಕೆ ಕಾವೇರಿ ಮಾತೆಯ ಮತ್ತು ಜನಾಂಗದ ಬೆಂಬಲ ಖಂಡಿತವಾಗಿಯೂ ಇದೆ. ಈಗ ಪಾಕ್ಷಿಕ ಪತ್ರಿಕೆಯಾಗಿ ಪ್ರಕಟವಾಗುತ್ತಿರುವ "ಕೊಡಗು ಸಂಗಾತಿ" ಇನ್ನೂ ಹೆಚ್ಚಿನ ಪುಟಗಳಲ್ಲಿ "ವಾರ ಪತ್ರಿಕೆ" ಯಾಗಿ ಬರಲಿ ಎಂದು ಹಾರೈಸಿ ಎದುರು ನೋಡುತ್ತಿರುವ

ಕೆ.ಎಂ. ನಟರಾಜ್,
GTTC, ಬೆಂಗಳೂರು.

ಅರೆ ಭಾಷೆರ ವಿಭಾಗ

"ಕತ್ತಲೆ ಕಳ್‌ದ್..."

'ದೇವುರ್ ಹುಟ್ಟ್‌ಕೆ ಮುಂದೆ ತಲ್ಪಿರೆ ಸಾಕಲ್ಲ !' ಅಂತ ಹೇಳ್ದ ಮಾಂಕುಗಾಣಿಜ ಸೂರ್ಯ ಎರ್‌ಡ್ ಮಾರ್ ಮೇಲೆ ಹೋದರೂ ಬಂದ್ ಮುಟ್ಟ್‌ತ್‌ಲ್ಲೆ. ಇನ್ ಒಳ್ದವರ ಕಾಣದೆ ದಿನ ಸುಮಾರ್ ಆತ್. ಕೆಲವ್ವು ಮಳೆಗಾಲದ ಶೀತ ಹಿಡ್‌ದ್‌ದ್, ಇಲ್ಲರೆ ನಾಕರ ಜರ ಬಂದ್‌ದ್ ಮಂದ್ರಿಗೆ ಅವು ರಿದ್ದರೆ, ಇನ್ನ್ ಕೆಲವ್ ಇದೇ ಒಳ್ಳ ಸಮಯಾಂತ ನೆಂಟ್ರಲ್ಲಿಗೋ ಬಳಗದಲ್ಲಿಗೋ ಹೋಗಿದ್ದೊ. ಒಟ್ಟಾರೆ ಕೆಲ್ಸಕ್ಕೆ ಬಾರದ ಚೋಮಣ್ಣನ ಬುಟ್ಟರೇ ಬೇರೆ ಇನ್ನೊಂದ್ ಗಂಡ್ ಪ್ರಾಣಿದ ಪತ್ತೆನೇ ಇಲ್ಲೆ. ಇನ್ನ್ ಎಂತ ದಾರಿ ಕಾಣದೆ ಅಪ್ಪನೂ, ಸಣ್ಣ ದಣಿಗಳೂ ಮಾಲಿಂಗನ ಕರ್‌ದ್‌ದ್,

"ಹೌದೋ ಮಾರಾಯ, ನೀ ಒಮ್ಮೆ ಪೇಟೆಗೆ ಹೋಗಿ ಬಂದೀಯನೋ ?" ಅಂತ ಕೇಳ್ದೊ. ಅಂವ ಎಂತದ್ ಹೇಳ್ದು ? "ಅಮ್ಮಮ್ಮ ದೇವ್ರೇ" ಹದ್ಕಿಬಿದ್ದ ಅವಂದ, "ನಂಗೆ ಆಕಿಲ್ಲೆಪ್ಪ" ಗ್ರಯ್ಸಿದ ಉತ್ತರನೇ ಬಾತ್. ಆದರೆ ಸಣ್ಣದಣಿಗ ಕಡ್ಡಿತುಂಡ್ ಮಾಡ್ದಾಂಗೆ, "ಆಕಿಲ್ಲೆಪ್ಪ ?! ನಿನ್ನ ಏನ್ ಫಾರೆಸ್ಟ್ ಗಾರ್ಡ್‌ಗ ಹಿಡ್‌ದ್ ತಿಂದವೆನೋ? ಹೋಕೂಂತ ಹೇಳ್ರೆ ಹೋಕೇ" ಅಂತ ತಾಕೀತ ಮಾಡ್ದೊ.

ಮತ್ತೆಂತದ್ ? ಮಾರಿಕಳಲಿ ತಲೆ ಕೊಯ್ಸಿಕಂಬಕೆ ಹೊರ್ಟ ಹಂದಿನಾಂಗೆ ಚೋಮಣ್ಣ ಪೇಟೆಗೆ ಮೋರೆ ಮಾಡ್‌ತ್. ಅವನ ಎಡಕಣ್ಣ್ ಹಾರ್‌ತ್, ಎಡಬುಜ ಅದ್‌ರ್‌ತ್. ಅಷ್ಟ್ ಹೊತ್ತ್‌ಗೆ ಮೋಡತುಂಬಿ ಕಪ್ಪಾಗಿದ್ದ ಪಡುವಣ ಆಕಾಶಲಿ ಆ ಹಗಲ್‌ಲಿನೂ ತಾರೀಖ್‌ಗ ಹೊತ್ತಿ ಉದುರ್ದೊ,

ಚೋಮಣ್ಣ ಬಿಡಾರಕ್ಕೆ ಹೋದಂವ ತೋರ್ತ್‌ನ ಬಿಚ್ಚಿ ಮೂಲೆಗೆ ಇಟ್ಟ್, ಕೋಮಣನ ಬಿಗ್‌ದ್ ಕಟ್ಟಿ, ಅಂವನ ಮೊದುವೆಗೆ ತೆಗ್ದಿದ್ದ ನಾಕ್‌ಮೊಳದ ಸೀರೆ ತುಂಡ್‌ನ ಉಟ್ಟ್, ಮೇಲೆ ಕಪ್ಪಟೆ ಹಿಡ್ದಿದ್ದ ಬೋಡಿ ಹಾಕಿ, ಮಡ್ಪೆಳೆನ ಪಗರಕ್ಕೆ ಇನ್ನೊಂದ್ ತುಂಡುವಸ್ತ್ರನ ತಲೆಗೆ ಬಿಗ್‌ದ್ ಕಟ್ಟಿ, ಮಡ್ಪೆಳೆನೊಳಗೆ ಮಡ್ಚಿ ಸಿಕ್ಕ್‌ಸಿದ್ದ ಸಣ್ಣದಣಿಗ ಅಂಗ್‌ಡಿ ಕಾದ್ರಮಾಪ್ಳೆಗೆ ಕೊಡಿಕೆ ಬರ್ದ ಸಾಮಾನ್ ಚೀಟಿ ಮತ್ತೆ ಕೊಡೆ ರಿಪೇರಿ ಮಾಡುವ

○ **ಕೆ.ಆರ್. ವಿದ್ಯಾಧರ್**, ಮಡಿಕೇರಿ

ಅಂತಪ್ಪನಾಯ್ಕರಿಗೆ ಕೊಡಿಕೆ ಬರ್ದ ಇನ್ನೊಂದು ಕಾಗದ ಎರಡರ್‍ನ್ನೂ ಬೋಡಿನ ಜೋಬ್‌ಗೆ ತುಂಬ್‌ಸಿ ಪೇಟೆಗೆ ಹೊರ್ಡಿಕೆ ತಯಾರಾತ್. ಆದಾಗಿ ಚೋಮಣ್ಣ ಕೆಳಗೆ ಕುದ್‌ದ್‌ದ್ ಬಗ್ಗಿ, ಮೊಲೆ ಉಜ್‌ಂಬ್‌ತಿದ್ ಕೂಸ್‌ಗೆ ಪುಚ್‌ಪುಚ್ ಪುತ್ತ ಕೊಟ್ಟ್‌ತ್. ಆಗ ಶಂಕರಿಗೆ ಪ್ರೀತಿ ಉಕ್ಕಿ ಕೈನೇಚಿ ಚೋಮಣ್ಣನ ಮೋರೆ ಪೂಜಿಕಾಕನ ಎಲ್ಲಿತ್ತೋ ದುಕ್ಕ, ಅಂವನ ಕಣ್ಣ್‌ಂದ ನಾಕ್ ಹನಿ ಕಣ್ಣೀರ್ ಪುಳ ಕ್ಯಾಂತ ಉದ್‌ರ್‌ತ್. ಹೀಂಗೆ ಯುದ್ಧಕ್ಕೆ ಹೊರ್ಟವರಾಂಗೆ ಹೊರ್ಟ ಚೋಮಣ್ಣ, ಸೂಡಿಕೆ ಕಿಡ್‌ಂಜೋಳ್‌ನ ಬದಲ್‌ಗೆ ಶಂಕರಿನ ಬಣ್ಣದ ಕೊಡೆ ಹಿಡ್‌ದ್‌ದ್, "ನಾ ಇನ್ನ್ ಬನ್ನೆನೇ" ಅಂತ ಹೆಣ್ಣ್‌ಗೆ ಹೇಳಿ ಹತ್ತ್‌ಮಾರ್ ಹೋವರೊಳಗೆ ಭರೋಂತ ದೆಪ್ಪಮಳೆ ಸುರಾತ್.

ಪೇಟೆ ತಲ್ಪಿದ ಚೋಮಣ್ಣ ಎಲ್ಲಿ ಯಾರ್ ಕಾಕಿ ಬಟ್ಟೆಯವ್ವು ಸಿಕ್ಕಿವೇನೊಂತ ಹೆದ್ರಿಕಂಡ್ ಬೇಗ ಬೇಗ ಕೆಲ್ಸ ಮಾಡಿ ಮುಗ್ಸಿತ್. ಕಾದ್ರ ಮಾಪ್ಳೆನಲ್ಲಿಂದ ಬೇಳೆ ಸಾಮಾನ್ ಕಟ್‌ಟ್ಸಿ, ಅಂತಪ್ಪ ನಾಯ್ಕರಲ್ಲಿಗೆ ಹೋಗಿ ಸಣ್ಣದಣಿಗ ಮುರ್ದ ಕಡ್ಡಿನ ಬದಲ್ಸಿಕೆ ಕೊಟ್ಟದ್ದ ಮರದಕಾಲ್ ಕೊಡೆನ ವಾಪಸ್ ತೆಕಂಡ್, ಶಂಕರಿಗೇಂತ ಒಂದ್ ತುಂಡ್ ಮಲ್ಲಿಗೆ ಹೂವ್‌ನ ಕಟ್ಸಿ ಕಂಡ್, ಮಯ್ಯರ ಹೋಟ್ಲ್ ಮುಂದೆ ದಾಟಕಾಕನ ನೀರುಳ್ಳಿಬಜೆನ ಪರಿಮಳಕ್ಕೆ ಚೋಮಣ್ಣನ ಬಾಯಲಿ ನೀರ್ ಅರ್‌ತ್. ಸೀದ ಹೊಟ್ಲೊಳಗೆ ನುಗ್ಗಿದ ಅಂವ ಒಂದ್ ಪಿಲೇಟ್ ನೀರುಳ್ಳಿಬಜೆ ತಿಂದ್ ಎರಡ್ ಗಲಾಸ್ ಚಾಯನೂ ಕುಡ್‌ತ್. ಅಲ್ಲಿಂದ ಎದ್‌ದ್ ಹೊರ್ಟವಂಗೆ ಪೋಲಿಸ್ ಸ್ಟೇಷನ್ ಮುಂದೆ ದಾಟಿಹೋಕನ ಗ್ರಾಚಾರ ಮುಡ್ಕಣೆ ಒಡ್ಡಿಕಾದ್ ಕುದ್ದಿತ್ತ್ !

ಪೋಲೀಸ್ ಸ್ಟೇಷನ್‌ನ ಮೆಟ್ಟ್‌ಕಲ್ ಮೇಲೆ ಬೀಡಿಎಳ್ಕಂಡ್, ಮಳೆ ಬುಟ್ಟಮೇಲೆ ಮೋಡದ ಎಡೆಂದ ಅರ್ಜಿಬಂದ ತೆಳ್ಳಂಗೆ ಬಿಸ್ಲ್ ಕಾಸಿಕಂಡ್ ನಿತ್ತಿದ್ದ ಕೊಂಬ ಮೀಸೆನ ಪೋಲೀಸ್ ಹುಕ್ರಪ್ಪಣ್ಣಂಗೆ ಸ್ಟೇಶನ್‌ನ ಎದ್ರ್ ದಾರಿಲಿ ಕಳ್ಳಕಳ್ಳರಾಂಗೆ ಅತ್ತ ಇತ್ತ ನೋಡಿಕಂಡ್, ದೂರ ದೂರ ಹೆಜ್ಜೆ ಹಾಕಿಕಂಡ್ ನಡ್ಯತಿದ್ದ ಚೋಮಣ್ಣ ಕಣ್ಣ್‌ಗೆ ಬೀತ್. ತಲೆಲಿ ಸಾಮಾನ್ ಕಟ್ಟ್, ಬೆನ್ನ್ ಹಿಂದೆ ಬೋಡಿಗೆ ಕೋಸಿ ಹಾಕಿದ ಮರದ ಕಾಲ್‌ನಕೊಡೆ, ಕಿಂಕಿಣ್ಕೆ ಅಡಿಲಿ ಅಮರ್ಸಿ ಹಿಡ್ಕಂಡ ಇನ್ನೊಂದು ಬಣ್ಣದ ಕೊಡೆ... ಪೋಲೀಸ್ ಹುಕ್ರಪ್ಪಣ್ಣ, "ಓ . ಹೋಯ್..." ಕೈತಟ್ಟಿ ಕರ್ದೊ. ಚೋಮಣ್ಣ ಯಾರೋ ಕರ್ದಾಂಗೆ ಆಗಿ ತಿರ್ಗಿ ನೋಡ್‌ತ್. ಹೌದು, ಕೊಂಬ ಮೀಸೆನ ಪೋಲೀಸ್ ಕೈಭಾಷೆ ಮಾಡಿ ಕರ್ಕಂಡುಟ್ಟ್. ಓ ಉಂದ್ರಾಡಿ...! ಹೆದ್ರಿಕೆ ಆಗಿ ಕರ್ಲ್ ಬಾಯಿಗೆ ಬಾತ್, ತಲೆ ಗಿರಿಗಿರಿ ಗಿರ್ಗಿಟೆನಾಂಗೆ ತಿರ್ಗಿಕೆ ಸುರ್ ಆತ್. ಅಂವಂಗೇ ಗೊತ್ತಿಲ್ಲದಾಂಗೆ ಪುಸ್ಸಂತ ಹಿಂದೆಂದ ಹೂಂಸ್ ಹೊರ್ಟತ್.

[ಮುಂದಿನ ಸಂಚಿಕೆಗೆ]

ಶೂ ಹಾಕುದೇ ಬ್ಯಾಡ, ಚಪ್ಪಲ್ ಹಾಕಂಡ್ರೆ ಸಾಕ್

ಹೊತ್ತಾರೆ ಬೊಳಿ ಬೊಳಿ ಬುಟ್ಟದಷ್ಟೆ, ನಾ ಇನ್ನೂ ಹಾಸಿಗೆಂದ ಎದತ್ಲೆ. ಹೊರಗೆ ಯಾರೋ ಕರ್ದಂಗೆ ಆತ್. ಯಾರದ್...? ಅಂತೇಳಿ ಎದ್ದ್‌ಬಂದ್ ಬಾಗ್ಲ್ ತೆಗ್ಯಕಾಕನ ಆನೆಗುಂಡಿ ಬಾಲಣ್ಣ ನೆಗಾಡ್ಕಂಡ್ ನಿತ್ತುಟ್ಟು. ಒಟ್ಟಿಗೆ ಅವನ ಬೊಗ್ಗಿ ನಾಯಿನೂ ಉಟ್ಟು. ಓ... ಈಗ ಏಳ್ಪು ಅಷ್ಟೆನಾಂತಾ ಹೇಳ್ಕಂಡ್ ಬಾಲಣ್ಣ ಒಳಗೆ ಬಾದು, ನನ್ನ ಸಿಂಗನಾಯಿ ಬಾಲ ಅಲ್ಲಾಡಿಸಿಕಂಡ್ ಬೊಗುಳ್ದು ಸರಿಯಾತ್. ಅಷ್ಟಾಕಾಕನ ಅವನ ಬೊಗ್ಗಿ ನಾಯಿ ಕುಂಯಿೀ... ಕುಂಯಿೀ...ತೇಳ್ತ್. ಸಿಂಗ ಅವರ ಮೂಸಿ ನೊಡ್ತ್. ಎರಡೂ ತೋಟದ ಕಡೆ ಓಡ್ದೊ

ಬನ್ನಿ ಬಾಲಣ್ಣ ಕುದ್ಕಣಿ, ನಾನ್ ಬೇಗ ಮುಖ ತೊಳ್ಕ ಣಂತೇಳಿ ಅವನ ಕುದ್ರಿಸಿ ನೀರ್ ಹತ್ರ ಹೋದೆ. ಅಮ್ಮ ಅಂವಂಗೆ ಕಾಫಿ ಕೊಟ್ಟತ್. ನಾನ್ ಬಾಲಣ್ಣ ಏಕೆ ಬಂದಿರ್ದೂಂತ ಗ್ಯಾನ ಮಾಡಿಕಂಡ್ ಹಲ್ಲುಜ್ಜಿ ಮುಖ ತೊಳ್ದ್ ಅಡಿಗೆ ಮನೆಗೆ ಹೋಗಿ ಕಾಫಿ ತಗಂಡ್ ಕಯ್ಯಾಲೆಗೆ ಬಂದ್ ಬಾಲಣ್ಣನ ಹತ್ರ ಮಾತಾಡಿಕೆ ಕುದ್ದೆ. ಬಾಲಣ್ಣನ ಮುಖ ಒಂದ್‌ತರಾ ಹರ್ಲೆಣ್ಣೆ ಕುಡ್ದಂಗೆ ಇದ್ದದ್ ನೋಡಿ ಸಂಗತಿ ಎಂತದೋ ಬಾರಿನೇ ಇರ ಕುಂತ್ತೇಳಿ ಗ್ಯಾನಮಾಡಿಕಂಡೆ.ಮಳೆ ಹೊಳಿ, ಕೆಲಸ ಅದ್ ಇದ್ ಎಲ್ಲಾ ಮಾತಾಡಿ ಬಾಲಣ್ಣ ಈಗ ವಿಷಯಕ್ಕೆ ಬಾತ್.

ನನ್ನ ಅಪ್ಪನ ವಿಷಯ ಗೊತ್ತುಟಾ ರಾಜ? ಅವ್ವ ಸತ್ತ್ ಆರ್ ತಿಂಗ ಆತ್ಲೆ. ಅಪ್ಪ ಮದುವೆ ಆಕೆ ಹೊರ್ಟುಟು. ಮಕ್ಕಳ, ಪಿಳ್ಳೆಕಳ ಎಲ್ಲಾ ಕಂಡ್ ಈ ಮುದಿ ಪ್ರಾಯಲಿ ನಂಗೆ ಮದುವೆ ಆಕುತಾ ಹೇಳ್ತಾಉಟ್ಟು. ವಿಷಯ ಕೇಳಿ ನನ್ನ ಹೆಣ್ಣ್ ಅನ್ನ ನೀರ್ ಬುಟ್ಟ್ ಮರ್ಗ್ಕಂಡ್ ಕುದ್ದುಟು. ತಂಗೆ ಮೊನ್ನೆ ಗಂಡನೊಟ್ಟಿಗೆ ಬಂದ್ ಸುಮಾರ್ ಬುದ್ಧಿ ಹೇಳ್ತ್. ಯಾರ ಮಾತ್‌ನು ಕೇಳ್ದುಲೆ. ಈಗ ಇದ್ ದೊಡ್ಡ ಸಮಸ್ಯೆ ಆವ್ಟು. ದ್ಯಾಪಮಾವ, ಅಪ್ಪಯ್ಯಜ್ಜ, ರಘುಬಾವ, ಉತ್ತಯ್ಯದೊಡ್ಡಪ್ಪ ಬಾಬಣ್ಣ ಎಲ್ಲವೂ ಅಪ್ಪನೊಟ್ಟಿಗೆ ಪಂಚಾಯಿತಿ ಮಾಡಿಕೆ ಇಂದ್ ಮನೆಗೆ ಬಂದವೆ. ನೀನ್ ಸನ ಬರಕುಂತ್ತೇಳಿ ಕೇಳಿಕೆ ಬಂದದ್, ಅಂತೇಳಿ ಉಸ್ರು ಬುಟ್ಟತ್ ಬಾಲಣ್ಣ.

ನಾನ್ ಬಾಲಣ್ಣನ ಅಪ್ಪ ಸುಬ್ಬಯ್ಯ ಮಾವನ ಬಗ್ಗೆ ಯೋಚನೆ ಮಾಡಿಕೆ ಸುರು ಮಾಡ್ದೆ. ಅಲ್ಲಾ ಈ ಅಜ್ಜಂಗೆ ಎಂತದ್ ಆವುಟಪ್ಪ ? ಅಜ್ಜಿ ಮೊನ್ನೆ ಮೊನ್ನೆ ಸತ್ತದ್ 'ಊರು ಹೋಗು ಕಾಡ್ ಬಾಂತೆಳ್ತುಟ್ಟು.ಡೊಳ್ಳು ಹೊಟ್ಟೆ ಹೊತ್ಕಂಡ್ ನಡ್ಯಕೇ ಆದ್ಲೆ, ಮದ್ವೆ ಬೇರೆ ಕೇಡ್. ಅಷ್ಟಕ್ಕೂ ಈ ಅಜ್ಜ ಬಾರಿ ಹಠಮಾರಿ. ನಂಗೆ ಯಾಕ್ಕಪ್ಪ ಬೇಕು ಈ ಉಸಾಬರಿ. ಹೆಂಗಾರ್ ನಾ ತಪ್ಪಿಸಿಕಂಬದು ಒಳ್ಳೆದೂಂತ ನನ್ನ ಬುದ್ಧಿ ನಂಗೆ ಹೇಳ್ತ್. ನಾನ್ ಹೇಳ್ದೆ, ಅಲ್ಲ ಬಾಲಣ್ಣ ಇದ್ ಹೋಗಿ ಹೋಗಿ ಮದ್ವೆ ವಿಷಯ. ನಾನೋ ಮದ್ವೆ ಆಗದ ಹೈದ. ಈ ವಿಷಯುನ ನಾನ್ ಎಂತಾಂತ ಮಾತಾಡ್ಲು ? ನಂಗೆ ಯಾವ ಅನುಭವ ಉಟ್ಟು ? ನಾವು ಹೇಳ್ದಂಗೆ ಮಾವನೂ ಕೇಳಿಕಿಲ್ಲೆ. ಮಕ್ಕ ನಂಗೆನೇ ಬುದ್ಧಿ ಹೇಳಿಕಾಗೊಳೊನಾಂತೇಳಿ ಬಯ್ಯಿಕ್ಕಿಲೆನಾ ? ನೀವೆ ಸರಿ ಮಾಡಿ ಕಣಂತ್ತೇಳಿ ಜಾರಿಕಂಬಕೆ ನೋಡ್ದೆ.

ಎಷ್ಟಾದರೂ ಬಾಲಣ್ಣ ಅಷ್ಟ್ ಸುಲಭಲಿ ಬುಟ್ಟದೆನಾ? ಉಂಬುಳುನಂತ ಮನ್ಸ್ಯ. ನೀನ್ ಬಂದರೆ ಸಾಕ್. ಹಿರಿಯವು ಅವೆಲ್ಲ ಒಳೊ. ಅವು ಸರಿ ಮಾಡುವೆಂತ ನಂಗೆ ಧೈರ್ಯಉಟ್ಟು. ನೀನ್ ಬಂದೇ ಬರಕು. ಇಲ್ಲರೆ ನಾನ್ ಹೋಕಿಲೆ, ಇಲ್ಲೆ ಕುದ್ಕಂಬೆಂತೇಳಿ ಕುಂಡೆನ ಗಟ್ಟ ಊರ್ತ್. ನಾನ್ ಉಪಾಯ ಕಾಣದೆ, ಬಾ ಅಂದರೆ ರೊಟ್ಟಿ ತಿಂದ್ ಪೋಯಿಂತ್ತೇಳಿ, ಅಡಿಗೆ ಮನೆಗೆ ಹೋಗಿ ಅಮ್ಮಂಗೆ ಎರ್ಡ್ ಬಟ್ಲ್ ಸಾರ್ ಬಳ್ಸಿಕೆ ಹೇಳಿ, ಬಟ್ಟೆ ಹಾಕಂಬಕೆ ರೂಂಗೆ ಹೋದೆ. ಬಟ್ಟೆ ಹಾಕಂಬಕಾಕನ ಅಮ್ಮ ಸಾರ್ ಬಡ್ಸಿದ ಬಟ್ಲ್‌ನೂ, ಬಿಸಿ ಬಿಸಿ ರೊಟ್ಟಿನೂ, ಒಂದು ತಟ್ಟೆಲಿ ತಂದೋ. ನಾನ್ ಎರಡ್ ರೊಟ್ಟಿ ತಿಂಬಕಾಕನ ಸಾರ್ ಲಾಯ್ಕ ಆವುಟೂಂತಾ ಹೇಳ್ಕಂಡ್, ಬಾಲಣ್ಣ ನಾಲ್ಕ್ ರೊಟ್ಟಿ ತಿಂತ್. ಕೈ ತೊಳ್ದ್ ಹೊರಗೆ ಬಾಕಾಕನ ಬಾಲಣ್ಣ "ಬೀಡಿ ಉಟ್ಟೆಯಾ" ? ಅಂತ ಕೇಳ್ತ್. ಬಿಟ್ಟಿ ಸಿಕ್ಕಿರೆ ಅವಂಗೆ ಎಲ್ಲಾ ಬೇಕು. ನಾನ್ ಇಲ್ಲಂತ್ತೇಳಿ ಎಲೆ ಅಡಿಕೆ ಕೊಟ್ಟೆ.

ಅಮ್ಮಂಗೆ ಈಗ ಬನ್ನೆಂತೇಳಿ ನಾನ್ ಕೋಲೆ ಬಸವನಂಗೆ ಅವನೊಟ್ಟಿಗೆ ಹೊರ್ಟೆ. ನಾವು ಹೋಕೆ ಮುಂದೆ ದ್ಯಾಪಮಾವ, ಅಪ್ಪಯ್ಯಜ್ಜ, ರಘುಬಾವ ಅಲ್ಲಿದ್ದೊ. ಕುದ್ದ್‌ದ್ ಸ್ವಲ್ಪ ಹೊತ್ತಾಕಕನ ಉತ್ತಯ್ಯ ದೊಡ್ಡಪ್ಪನೂ, ಬಾಬಣ್ಣನೂ ಬಂದೋ. ನಾನ್ ಎಲ್ಲರ ಮುಖ ನೋಡಿ ನೆಗಾಡಿ ಒಂದ್ ಮೂಲೆಲಿ ಕುದ್ದೆ. ದೊಡ್ಡವರ ಮುಂದೆ ಕುದ್ದದ್ದಕ್ಕೆ ಸಣ್ಣದ್ ಇರ್ಕನ ಪೊಪ್ಪ ನಾಲ್ಕ್ ಕೊಟ್ಟದ್ ಗ್ಯಾನ ಆತ್. ಅಷ್ಟೊತ್ತಿಗೇ ಅಪ್ಪಯ್ಯಜ್ಜ ವಿಷಯಕೆ ಬಾತ್. ಅಲ್ಲಾ ಸುಬ್ಬಯ್ಯ ! ಬಾಲ ಹೇಳ್ದ್ ನಿಜನಾ ? ನಿಂಗೆ ಇದೆಂತ ಹುಚ್ಚು ಮಾರಾಯ ? ಸುಬ್ಬಯ್ಯ ಮಾವ ಅಪ್ಪಯ್ಯಜ್ಜನ ಮುಖ ನೋಡಿ ಸುಮ್ಮ ನಾತ್. ಆಗ ದ್ಯಾಪಮಾವ ಮದ್ವೆ ಆದು ಸರಿ, ಗೂಡೆ ಎಲ್ಲಿ ಯಾರ್ ನೋಡಿಯೋಳನಾ ಅಂತ ಕೇಳ್ತ್. ಸುಬ್ಬಯ್ಯ ಮಾವ ಒಮ್ಮೆ ಉದ್ದಕ್ಕೆ ಒಮ್ಮೆ ಅಡ್ಡಕ್ಕೆ ತಲೆ ಅಲ್ಲಾಡಿಸಿತ್. [ನೋಡ್ಯೊಳೆ, ನೋಡ್ತ್‌ಲೆ, ತೇಳುವ ಎರಡೂ ಅರ್ಥನೂ ಅದರ್‌ಲ್ಲಿತ್] ಅವರ ಗೇರು ಬೀಜ ಕೊಚ್ಚಿಗೆ ಕೆಲ್ಸಕ್ಕೆ ಬರ್ವ ಹೂನ್ನಮ್ಮ ನೊಟ್ಟಿಗೆ ಅವ್ಕೆ ಒಳ್ಳೆದ್ ಉಟ್ಟೊಂತೇಳಿ ಊರಿಗೆ ಗೊತ್ತಿತ್ತ್. ಈಗ ರಘುಬಾವ ಸುರು ಮಾಡ್ತ್. ಅಲ್ಲ ಮಾವ ನಿಮ್ಮ ಮಣಂಗೆ ಮದುವೆ ಆಗಿ ಎರ್ಡ್ ಮಕ್ಕ ಆದೋ, ಒಬ್ಬಳಿಗೆ ಕಳ್ದ ವರ್ಷ ಮದುವೆ ಮಾಡ್ದರಿ. ಈಗ ನಿಮಿಗೇಕೆ ಈ ಬುದ್ಧಿ ಬಾತ್ ? ಕಮಲ ಬೇರೆ ಕಾಲೇಜ್‌ಗ ಹೋದ. ಅವಳ ಭವಿಷ್ಯ ಎಂತಾಕು?

ಇದೆಂತ ಚಪಲ ಈ ವಯಸ್ಸ್‌ಲಿ? ಸೊಸೆನೂ ಉಟ್ಟ್, ಮಗಳೂ ಉಟ್ಟ್. ನಿಮ್ಮ ಕೆಲ್ಸ ಅವು ಮಾಡಿ ಕೊಡ್ದುಲೇನಂತ ಸ್ವಲ್ಪ ಸಿಟ್ಟ್‌ಲೇ ಕೇಳ್ತ್.

ಈಗ ಸುಬ್ಬಯ್ಯ ಮಾವ ಮೆಲ್ಲಂಗೆ ಬಾಯಿ ಬುಟ್ಟತ್. ಎಲ್ಲವೂ ಒಳೋ, ಎಲ್ಲಾ ಕೆಲಸನೂ ಮಾಡ್ವೆ. ನೀವು ಹೇಳ್ದ್ದ ಸರಿ. ಆದ್ರೆ ನನ್ನ ಕಷ್ಟ ಏನೊಂತೇಳಿ ನೀವು ಸ್ವಲ್ಪ ಯೋಚನೆ ಮಾಡ್ದರಿಯಾ ? ಅಂತ್ತೇಳಿ ಸ್ವಲ್ಪ ಹೊತ್ತ್ ಸುಮ್ಮನಾತ್. ನಾನ್ ಇವರ ತೊಂದರೆ ಎಂತದಪ್ಪಂತೇಳಿ ತಲೆ ತೊರ್‍ಸಿಕಂಡೆ. ಎಲ್ಲವೂ ಸುಬ್ಬಯ್ಯ ಮಾವನ ಮುಖನೇ ನೋಡ್ದೊ. ಸುಬ್ಬಯ್ಯ ಮಾವ ಸುರುಮಾಡ್ತ್, ನೋಡಿ ನಾನ್ ನೆಂಟ್ರಮನೆ, ಮದುವೆ ಮನೆ, ತಿಥಿ ಮನೆಂತ್ತೇಳಿ ಸ್ವಲ್ಪ ತಿರ್‍ಗ್ಗದು ಜಾಸ್ತಿತ ನಿಮಿಗೆ ಗೊತ್ತುಟಲ್ಲ. ಆಗ ನಾನ್ ಕೋಟ್, ಪ್ಯಾಂಟ್ ಹಾಕಿ ಆದ ಮೇಲೆ ಕಷ್ಟ ಬಾದು. ಮಾರಾಯರ್‍ರೆ, ನೋಡಿ "ಇನ್ನ್ ಶೂ ಹಾಕೊಕಲ್ಲಾ" ಅಂತೇಳ್‌ಕಾಕನ ತುಂಬಾ ಸಂಕಟ ಆದೆ. ಯಾಕೇಂತೇಳ್ರೆ ನಂಗೆ ಈ ಹೊಟ್ಟೆಂದಾಗಿ ಬಗ್ಗಿ ಶೂ ಲೇಸ್‌ನ ಕಟ್ಟಿಕಂಬಕಾದ್ಲೆ. ಬಾರಿ ಕಷ್ಟಾದೆ. ಹೆಂಗಾರ್ ಮಾಡಿ ಕಟ್ಟಿ ಕಂಡರೆ ಅದ್ ಸಡ್ಲ ಆಗಿ ದಾರಿಲಿ ಆಗಾಗ ಜಾರಿ ಹೋಗ್ತಿತ್ತ್. ಕಮಲನಕ್ಕಲೆ ಕಟ್ಟಿಕೊಡಿಕೆ ಹೇಳ್ನೆಂತ್ತೇಳ್ರೆ ಅವ್ಳು ನಾ ಏಳಿಕೆ ಮುಂದೆ ತಿಕ ತಿರ್‍ಗ್ಸಿಕಂಡ್ ಕಾಲೇಜ್‌ಗೆಂತಾ ಹೋದೆ, ಪಿಳ್ಳೆ ಕಳೋ, ಹಿಂದೆಂತ್ತೇಳ್ರೆ ಮುಂದೆ, ಮುಂದೆಂತ್ತೇಳ್ರೆ ಹಿಂದೆ ಕಟ್ಟ್‌ವೆ. ಮತ್ತೆ ಅದ್ ಬಿಚ್ಚಿಕೆ ಆದೆನಾ? ಕೊಯ್ದ್ದೆ ತೆಗಿಯಕು. ಸೊಸೆನ ಹತ್ರ ಹಾಕಿಕೊಡೂಂತ ಹೇಳಿಕೆ ಆದೆನಾ ? ಅದ್ಕೆ ನಾ ಮದ್ವೆ ಆದರೆ ಈ ರಗಳೆನೇ ಇಲ್ಲೆಲ್ಲ !

ಈಗ ಎಲ್ಲಾವ್ಕು ಸಮಾಧಾನ ಆತ್. ಸಮಸ್ಯೆ ತುಂಬಾ ದೊಡ್ಡದಲ್ಲಾಂತ ಆದರೂ ಸಮಸ್ಯೆ ಸಮಸ್ಯನೇ ಅಲ್ಲಾ ? ಪರಿಹಾರ ಹುಡ್ಕಕು ಅಲಾ ? ಎಲ್ಲವೂ ಒಬ್ಬರ ಮುಖ ಒಬ್ಬ ನೋಡಿ ಕಂಡೋ. ಉತ್ತಯ್ಯ ದೊಡ್ಡಪ್ಪ ಇದ್ಕೆ ಎಂತದ್ ಪರಿಹಾರ ಬಾಬು ? ಅಂತ್ತೇಳಿ ಬಾಬಣ್ಣನ ಕೇಳ್ದೊ. ಬಾಬಣ್ಣ-ಸುಬ್ಬಯ್ಯ ಮಾವ ಒಪ್ಪಿರೆ ಇದ್ಕೆ ಸುಲಭದ ಪರಿಹಾರ ಉಟ್ಟೊಂತೇಳಿ ಅವರ ಮುಖ ನೋಡ್ತ್. ಅಪ್ಪಯ್ಯಜ್ಜ, ದ್ಯಾಪಮಾವ ಎಂತದ್ ಹೇಳ್ ಮಾರಾಯಾಂತೇಳಿ ಬಾಬಣ್ಣನ ಹತ್ರ ಕೇಳ್ದೊ. ಬಾಬಣ್ಣ ಗಂಭೀರಾಗಿ ಹೇಳ್ತ್. ಸುಬ್ಬಯ್ಯ ಮಾವನ ನೋಡಿ ಇನ್ನ್ ಯಾರಿಗೆ ಎಂತಾಕು ? ಸುಬ್ಬಯ್ಯ ಮಾವ ಇನ್ನ್ ಯಾರ್‍ನ್ ನೋಡಿಕೆ ಉಟ್ಟ್ ? ಆವಂತದೆಲ್ಲಾ ಆಗಿ ಹೋವುಟಲ್ಲಾ ? ಅದ್ಕೆ ಅವು ಇನ್ನ್ ಮುಂದೆ ಶೂ ಹಾಕುದೇ ಬ್ಯಾಡ..... ಚಪ್ಪಲ್ ಹಾಕಂಡ್ರೆ ಸಾಕೂಂತೇಳಿ ಸಮಸ್ಯೆನ ಬಗೆ ಹರಿಸಿದ !......

○ **ರಾಜ ಚೆರಿಯಮನೆ**, ಜೋಡುಪಾಲ

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ

ಗೌಡ ಮಹಿಳಾ ಸಂಘಟನೆ, ಮೈಸೂರು.

ಸಂಘ, ಸಂಸ್ಥೆಗಳು ಹುಟ್ಟಿಕೊಳ್ಳುವುದೇ ವೇದಿಕೆಯನ್ನು ಕಲ್ಪಿಸುವುದಕ್ಕಾಗಿ-ಸಮಾಜ ಸೇವೆಗಾಗಿ. ಇಂತಹ ಸಂಘ ಸಂಸ್ಥೆಗಳಲ್ಲಿ ನಾನು ಮೇಲು ಕೀಳು ಎಂಬ ತಾರತಮ್ಯ ಬರಬಾರದು. ಇಲ್ಲಿ ಸೇರಿದ ನಾವೆಲ್ಲರೂ ಒಂದೇ, ಒಂದೇ ಜನಾಂಗದವರು, ಪ್ರತಿಯೊಬ್ಬನೂ ಗೌಡ ಎಂಬ ಭಾವನೆ ಬರುವಂತಾಗಿ, ನಮ್ಮ ಜನಾಂಗದಲ್ಲಿ ಕೈಲಾಗದವರಿಗೆ, ಆರ್ಥಿಕವಾಗಿ ಕುಂಠಿತರಾದವರಿಗೆ ಇತಂಹ ಸಂಘ ಸಂಸ್ಥೆಗಳು ಸಹಕಾರವನ್ನು ನೀಡುವಂತಾಗಬೇಕು ಎಂದು, ದ.ಕ. ಮತ್ತು ಕೊಡಗು ಜಿಲ್ಲಾ ಗೌಡ ಮಹಿಳಾ ಸಂಘಟನೆ, ಮೈಸೂರು – ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಕುಂಭಗೌಡನ ಮುತ್ತಮ್ಮ ದೇವಯ್ಯನವರು ಮಾತನಾಡಿದರು

ದಿನಾಂಕ 26-1-98ರಂದು ನಡೆದ ದ.ಕ. ಮತ್ತು ಕೊಡಗು ಜಿಲ್ಲಾ ಮಹಿಳಾ ಸಂಘಟನೆ ಇದರ ಸಭೆ ಕೊಡಗು ಗೌಡ ವಿದ್ಯಾ ಸಂಘ ಮೈಸೂರು ಇಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕುಂಭಗೌಡನ ಮುತ್ತಮ್ಮ ದೇವಯ್ಯನವರು ವಹಿಸಿದ್ದರು. ಚೆಟ್ಟಿಮಾಡ ಲಕ್ಷ್ಮಿ ರಘುಪತಿಯವರು ಮುಖ್ಯ ಅತಿಥಿಗಳಾಗಿದ್ದರು. ಪಟ್ಟಡ ರಶ್ಮಿಯವರ ಪ್ರಾರ್ಥನೆಯಿಂದ ಕಾರ್ಯಕ್ರಮ ಆರಂಭವಾಗಿ ಓಡಿಯನ ಝಾನ್ಸಿ ಸ್ವಾಗತಿಸಿದರು. ಸಂಘಟನೆಯ ಕಾರ್ಯದರ್ಶಿನಿ ಗೀತಾ ಮೋಂಟಡ್ಕ ವರದಿ ವಾಚನ ಮಾಡಿ, ಅಧ್ಯಕ್ಷೆ ಧನು ಚೆರಿಯಮನೆ ಸಭೆ ಕರೆದಿರುವ ಉದ್ದೇಶವನ್ನು ಸಭೆಗೆ ತಿಳಿಸಿದರು. ಸಭೆಗೆ ಬಂದಂತಹ ಎಲ್ಲಾ ಸಭಿಕರ ಪರಸ್ಪರ ಪರಿಚಯದ ನಂತರ ಮುಂದಿನ ಕಾರ್ಯಕ್ರಮದ ಬಗ್ಗೆ ಚರ್ಚೆಗಳು ನಡೆದವು. ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದ ತಡಿಯಪ್ಪನ ಕುಮಾರ್ ಜಯ ಹಾಗೂ ಪಟ್ಟಡ ಪ್ರಭಾಕರ್ ಮಾತನಾಡಿ **ಸೂಕ್ತ** ಸಲಹೆಗಳನ್ನಿತ್ತರು. ಹೊಸೂರು ಸೀತಾರಾಮ್, ಮಣ್ಣಾಂಡ್ರ ರಮೇಶ್, ಕೆ. ಎಂ. ಮಾಚಯ್ಯ ಇವರುಗಳು ಅತಿಥಿಗಳಾಗಿ ಸಭೆಗೆ ಆಗಮಿಸಿದ್ದರು.

ಅಂದಿನ ಸಭೆಯ ಕಾಫಿ ತಿಂಡಿಯ ವ್ಯವಸ್ಥೆಯನ್ನು ಜನಾಂಗದ ಧಾನಿಯಾಗಿ ಪಟ್ಟಡ ಪೂವಮ್ಮ ಜಯರಾಂ ಸಹಾಯ ಮಾಡಿದರು. ಕೊನೆಯಲ್ಲಿ ಧನು ಚೆರಿಯಮನೆ ವಂದಿಸಿದರು.

ಸೂಚನೆ : ಮುಂದಿನ ಸಭೆ 8-2-98 ಭಾನುವಾರದಂದು ಅಪರಾಹ್ನ 2-30ಕ್ಕೆ ಕೊಡಗು ಗೌಡ ವಿದ್ಯಾರ್ಥಿನಿಲಯದಲ್ಲಿ ನಡೆಯುವುದು. ಗೌಡ ಮಹಿಳಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಂದಿನ ಕಾರ್ಯಕ್ರಮವನ್ನು ಸಾಂಗವಾಗಿ ನಡೆಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ.

ವರದಿ : **ಗೀತಾ ಮೋಂಟಡ್ಕ**

ಮನೆ ಬುಟ್ಟ್‌ಹೋದ ವೇಣು

ವೇಣು ತೇಳುವ ಹೈದ ಬಾರಿ ಪೋಕರಿ. ಇವಂಗೆ ಒಬ್ಬ ಅಣ್ಣ, ನಾಲ್ಕು ಜನ ಅಕ್ಕಂದ್ರ್. ಎಲ್ಲವುರ್‌ದ್ ಮದುವೆ ಆಗುಟು. ಅಂವ ಸಣ್ಣವ. ಅಪ್ಪಂಗೆಅವ್ವಂಗೆ ಬಾರಿ ಖುಷಿ. ಇವನ ತುಂಬಾ ಕೊಂಡಾಟ ಮಾಡ್ತಿದ್ದೊ. ವೇಣು ನೋಡಿಕೆ ಬಾರಿ ಪೊರ್ಲ್ಲ. ಅಂವ ಕಾಸ್ಲಿಗೆ ಹೋಕೆ ಬಾರಿ ಕಳ್ಳ. ಮಕ್ಕಳೊಟ್ಟಿಗೆ ಆಡಿಕೆ ಮಾತ್ರ ಬೇಗ ಹೋದೆ. ಅವ ಸ್ಕೂಲಿಂದ ಬಾಕನ ಅವ್ವ ಯಾಗೋಳು ತಿಂಡಿ ಮಾಡಿಸ್ಸದು ಅಂವಂಗೆ ತುಂಬಾ ಖುಷಿ. ಬಂದಂಗೆ ಬ್ಯಾಗ್‌ನ ಮೂಲೇಲಿ ಹಾಕಿ, ಕೈಕಾಲ್ ತೊಳಿಯದೇ, ಬಟ್ಟೆ ಬದಲಾಯಿಸದೇ, ಹಂಗೇ ತಿಂಡಿ ತಿಂಬಕ್ಕೆ ಕೂರ್‍ದ್ದ. ಆಗ ನೋಡಿ ಅಮ್ಮ ಬೈಯಕೆ ಸುರು ಮಾಡ್ಟೆ. ನಿಂದ್ ದಿನಾ ಇದೇ ಆತ್. ನಾಳೆಂದ ಒಂದು ಮಾಡಿಸ್ಸಲೇತ. ಆಗ ಅಂವ ಅಮ್ಮಂಗೆ ಜೋರ್ ಮಾಡ್‌ದು, ನೋಡಮ್ಮ ಮಾಸ್ಟ್ರಗ ಸ್ಕೂಲ್‌ಲಿ ಆಟ ಆಡುಸುವೆ, ಮತ್ತೆ ಪುನಃ ಆ ಮಕ್ಕ ಬಾಣೆಗೆ ಬಂದವೆ. ಅಲ್ಲಿಗೆ ವಾಲಿಬಾಲ್ ಆಡಿಕೆ ಹೋಕು. ಇನ್ನ್ ಬಟ್ಟೆ ಬಿಚ್ಚ್ಚದು ಎಷ್ಟೊತ್ತಿಗೆ, ಕೈಕಾಲು ತೊಳೆಯದು ಎಷ್ಟೊತ್ತಿಗೆ. ಈಗ ತಿಂಡಿ ತಿಂದ್ ಹೋನೆ ಮತ್ತೆ ಬಂದ್ ಮಲ್‌ಗ್‌ಕನ ಕೈಕಾಲ್ ತೊಳ್‌ಕಣೆಂತ ಅಮ್ಮಂಗೆ ಹೇಳ್‌ದೆ. ಅಮ್ಮ ಪಾಪ ಎಂಥ ಹೇಳ್‌ದುಲೇ. ಬೈಯದು ಸಹ ಇಲ್ಲೆ. ಈ ವೇಣು ಹೈದಂಗೆ ಏನಾತೋ ಗೊತ್ತ್‌ಲೇ. ಒಂದು ದಿನ ಮನೆಂದ ಓಡಿಹೋತ್. ಎಲ್ಲಿಗೆ ಹೋತ್ ತೇಳಿ ಯಾರಿಗೆ ಗೊತ್ತ್‌ಲೆ. ಹೋದ ಹೈದ ಕಾಗದ ಹಾಕಕೋ ಬೇಡ. ಅಂತು ಎಷ್ಟೊ ದಿನ ಆದ ಮೇಲೆ ಒಂದು ಕಾಗದ ಹಾಕಿಬುಟ್ಟ್‌ತ್. ಅವಂಗೆ ಅಲ್ಲಿ ಸಾಕಾಗಿರಕೂ ಕೆಲ್ಸ ಮಾಡಿ. ಅಪ್ಪಂಗೆ, ಅವ್ವಂಗೆ ಖುಷಿ ಆತ್. ಬೇಗ ಬೇಗ ಎರ್‍ಡ್ ಮೂರು ಜನ ಸೇರ್‍ಸಿ ಅಂವ ಇರುವ ಜಾಗಕೆ ಕಳ್ಸಿದೋ. ಇವು ಹೋದರೆ ಅಂವ ಸಿಕ್ಕದೇ ಅಲ್ಲಿದ್ದವು ಇವನ ರೂಮುಗೆ ಹಾಕಿ ಬಾಗ್ಲ್ ಹಾಕೊಳೊ. ಅಂತು ಒಂದಿನ ತಪ್ಪಿಸಿಕಂಡ್ ಬಂದ್‌ಬುಡ್ತ್. ಬಾಕನ ದುಡ್ಡ್ ಇಲ್ಲದೆ ಯಾರ್‌ದೊ ದುಡ್ಡ್‌ಹಾರ್‍ಸಿಕಂಡ್ ಬಂದ್ ಬುಡ್ತ್. ಅಂವ ಬಾಕನ ಜುಟ್ಟು, ಬುಟ್ಟು, ಓಲೆ ಚುಚ್ಚಿಕಂಡ್ ನೋಡಿಕೆ ಆದುಲೇ. ದಪ್ಪ ಬೇರೆ ಆಗುಟು. ಅವನ ಮನೆ ಪಕ್ಕದವಂಗೆ ಗೊತ್ತಾತ್‌ಲೆ. ಮತ್ತೇ ಬೇರೆಯವ್‌ಕೆ ಗೊತ್ತಾದೆ ಹೇಳಿ. ಅವನ ಹುಡ್‌ಕಿಕಂಡ್ ಬೇರೆ ಜನ ಬೈಕ್‌ಲಿ ಬಂದಿದ್ದೊ. ಆ ಹೈದ ಅಲ್ಲಿ ವೇಣು ತೇಳಿ ಹೇಳಿಟು ಹೆಸರ್‌ನ. ಅವು ಏನ್ ಮಾಡಿಯೊಳೋ ತೇಳ್ರೆ ಬಂದ್ ಕೇಳಿಯೋಳೊ [ಎಂಥೊ ಮನೆ ಹೆಸರ್ ಹೇಳಿ] ವೇಣು ತೇಳುವಂವ ಇಲ್ಲಿ ಉಟ್ಟಾತೇಳಿ. ಮನೆಯವುಕೆ ವೇಣು ತೇಳ್ರೆ ಯಾರ್‌ತ ಗೊತ್ತು ಬೇಕಲ್ಲಾ. ಊರು ಹೈದಂಗ ಬಂದವರನ್ನ ಓಡ್ಸಿ ಬುಟ್ಟೊಳೊ. ಅವು ಹೋದ ಮೇಲೆ ಒಳಗೆಂದ ಬಂದ್ ಹೇಳ್‌ದೆ. ನಾನ್ ಲವಿ. ನನ್ನ ವೇಣುತೇಳಿ ಬಂದೊಳಲ್ಲಾ ! ನನ್ನ ಹುಡುಕಿಕಂಡ್. ನಾನ್ ಸಿಕ್ಕನೇ ತೇಳಿ ಗ್ಯಾನ ಮಾಡುದು ಬೇಡ ಅವು. ಆಗ ಅವ್ವ ಹೇಳ್ತ್ ನೀನ್ ಒಳ್ಳೆ ಕೆಲ್ಸ ಮಾಡಿಯೋಳನೇ ಬೇರೆ ಹೆಸರನ್ ಹೇಳ್‌ದರ್‌ಂದ. ಯಾಕೆ ಹಿಂಗೇ ಮಾಡ್‌ದತ ನಾವು ಕೇಳ್ರೆ, ಅಂವ ಹೇಳ್‌ದು ನಾನ್ ಆಗ ಸಣ್ಣವ, ನಂಗೆ ಓದಿಕೆಬೋರ್ ಆತ್. ಅದಿಕ್ಕೆ ಹಿಂಗೆ ಮಾಡ್ದ್‌ತ. ಮತ್ತೆ ಅಂವ ಓದಿದೆ. ಅಂತು ಬುದ್ಧಿ ಬಂದುಟು ಅಲ್ಲಾ. ಅಂವ ಒಂದೊಂದು ಸಲ ಬಾರಿ ಬೇಜಾರು ಮಾಡ್ದೆ. ನಾನ್ ತಪ್ಪು ಮಾಡಿ ಬುಟ್ಟಿತೇಳಿ. ಅಂವ ನಿಜವಾಗಿ ವೇಣು ಅಲ್ಲ ಲವಿ.

ರಶ್ಮಿ ಉಲ್ಲಾಸ್, ಅವಂದೂರು.

ನ ಗೆ ಹ ನಿ

ಒವ್ಮೆ ಒಬ್ಬ ಹಂಗೇ ಪೇಟೆ ಸುತ್ತುತಾಕನ, ಒಂದು ಕಲ್ಯಾಣಮಂಟಪಲಿ ಎಲ್ಲಾವು ಊಟಕ್ಕೆ ಕುದ್ದಿದ್ದೊ ಗಡ. ಇಂವ ಅದನ್ನ ನೋಡಿ, "ಓ ಮೆಲ್ಲೆ ಹೋಗಿ ಕುದ್ದು, ಲಾಯ್ಕು ಹಂದಿ ಮಾಂಸ ತಿಂದು ಬರಕುತಾ ಹೇಳಿ, ಅಲ್ಲಿ ಹೋಗಿ ಒಂದು ಮೂಲೆಲಿ ಊಟಕ್ಕೆ ಕುದ್ದತ್.

ಕುದ್ದಂವ ಸುಮ್ಮನೆ ಕುದ್ದತಾ ? ಇಲ್ಲೆ! ಅಂವನ ಪಕ್ಕಲಿ ಕುದ್ದವನ ಹತ್ರ ಮಾತಾಡಿಕೆ ಶುರು ಮಾಡ್ತ್. "ಅಣ್ಣಾ ನೀವು ಯಾರ ಕಡೆ ? ಹೆಣ್ಣ್ ಕಡೆನಾ ಇಲ್ಲೆ ಗಂಡ್‌ಕಡೇನಾತಾ ಕೇಳ್ತ್. ಅದ್ಕೆ ಅಂವ ಹೇಳ್ತ್ ನಾ ಗಂಡ್ ಕಡೇತಾ. ಅದ್ಕೆ ಇಂವ ಹೇಳ್ತ್ ನಾ ಹೆಣ್ಣ್ ಕಡೇಂತಾ.

ಆಗ ಅಲ್ಲಿ ಅನ್ನ ಬಡ್ಸಿಕೆ ಬಂದಂವ ಹೇಳ್ತ್ "ಸುಮ್ಮನೆ ಕುದ್ದಕಂಡ್ ಊಟ ಮಾಡಿ ಹೋಗಿ. ಇಲ್ಲಿ ಹೆಣ್ಣ್, ಗಂಡ್ ಯಾರ್ ಇಲ್ಲೆ. ಇದ್ ತಿಥಿ ಊಟ"ಂತ.

ತೋಟಂಬೈಲು ಕಿರಣ್ ವೇಣುಗೋಪಾಲ್,
ಬೆಂಗಳೂರು.

ಕೊಡಗು ಸಂಗಾತಿ ಪ್ರಥಮ ವರ್ಷದ ಯುಗಾದಿಯ ವಿಶೇಷಾಂಕ – 1998

ನಂ. 35, "ಸವಿತಾ ನಿಲಯ" ಮೊದಲ ಅಡ್ಡರಸ್ತೆ, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ, ಜಯಲಕ್ಷ್ಮಿಪುರಂ, ಮೈಸೂರು – 570 012

ಕೊಡಗು ಸಂಗಾತಿ ತನ್ನ ಪ್ರಥಮ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ವಿಶೇಷ ಸಂಚಿಕೆಯನ್ನು ಹೊರತರಲು ಇಚ್ಛಿಸಿದೆ. ಕರ್ನಾಟಕದಾದ್ಯಂತ ಗೌಡ ಜನಾಂಗದ ಮನೆ ಮಾತಾಗಿರುವ, ಓದುಗರ ಮನಸ್ಸನ್ನು ಗೆದ್ದು ತನ್ನ ಸ್ವಂತಿಕೆಯಿಂದ ಮುನ್ನಡೆದಿರುವ 'ಕೊಡಗು ಸಂಗಾತಿ' ಜನಾಂಗದವರ ಜಾಹೀರಾತುಗಳ ಪ್ರಕಟಣೆಗೆ ಉತ್ತಮ ಮಾಧ್ಯಮವಾಗಿದೆ

'ಕೊಡಗು ಸಂಗಾತಿ' ಹೊರತರುತ್ತಿರುವ ಈ ವಿಶೇಷ ಸಂಚಿಕೆ ಕಥೆ, ಸಾಹಿತ್ಯಿಕ ಲೇಖನ, ವೈಚಾರಿಕ, ಹಾಸ್ಯ ಲೇಖನ, ವಿಡಂಬನೆಗಳನ್ನೊಳಗೊಂಡಿರುವುದಲ್ಲದೆ, ಹಿರಿಕಿರಿಯರೆಲ್ಲರಿಗೂ ಪ್ರೋತ್ಸಾಹಿಸುತ್ತಿರುವ ಹಾಗೂ ಪ್ರತಿಯೊಬ್ಬ ಗೌಡ ಜನಾಂಗದಲ್ಲಿಯೂ ಶಾಶ್ವತವಾಗಿ ಉಳಿಯುವ ಪತ್ರಿಕೆ ಇದಾಗಿದೆ.

1998ರ ಏಪ್ರಿಲ್ ದ್ವಿತೀಯ ವಾರದಲ್ಲಿ ಸುಂದರ ಮುದ್ರಣದೊಂದಿಗೆ ಕ್ರೌನ್ ಆಕಾರದಲ್ಲಿ ಹೊರಬರುವ ಈ ಸಂಚಿಕೆಗೆ ತಮ್ಮ ಸಂಸ್ಥೆಯ ಹಾಗೂ ವೈಯಕ್ತಿಕವಾದ ಶುಭಾಶಯ/ಜಾಹೀರಾತುಗಳನ್ನು ನೀಡಿ ಕೊಡಗು ಸಂಗಾತಿ ಪತ್ರಿಕೆಯು ಬೆಳೆಯಲು ಪ್ರೋತ್ಸಾಹಿಸಬೇಕಾಗಿ ನಮ್ಮ ನಮ್ರ ಮನವಿ.

ಜಾಹೀರಾತಿನ ವಿವರ :	ಚಂದಾ ವಿವರ	
ಕೊನೆ ಹೊರ ಪುಟಕ್ಕೆ – 3000	1 ವರ್ಷಕ್ಕೆ	- 120
ಒಳ ಒಂದು ಪುಟಕ್ಕೆ – 2000	ಹಿತೈಷಿ	- 2500
ಅರ್ಧ ಪುಟಕ್ಕೆ – 1000	ಪೋಷಕ	- 5000
ಕಾಲು ಪುಟಕ್ಕೆ - 500	ಮಹಾಪೋಷಕ	- 10000

[ಲೇಖನಗಳನ್ನು /ಜಾಹೀರಾತುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 28-2-1998]

[ವಿ. ಸೂ. : ವಿಶೇಷ ಸಂಚಿಕೆಗೆ ಲೇಖನಗಳು ಮತ್ತು ಜಾಹೀರಾತುಗಳನ್ನು ಕಳುಹಿಸುವವರು
ವಿಶೇಷ ಸಂಚಿಕೆಗೆ ಎಂದು ಬರೆಯುತಕ್ಕದ್ದು]

ವಂದನೆಗಳೊಂದಿಗೆ, –ಸಂಪಾದಕಿ

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-21 Published at Mysore, Editor PATTADA P. SHEELAMANI, No. 35, 1st Cross, 4th Block (Near Divisional Telephone Office) Jayalakshmipuram, Mysore-570 012 Phone : 516771